## 33

# ಅಂತಿಯೋಕ್ಯದಲ್ಲಿ ಮೊದಲ ಸಾರಿ

## (11:19-30)

ಪ್ರಥಮವಾಗಿ ನಡೆಯುವಂಥ ಯಾವುದೇ ಕಾರ್ಯವಾಗಿರಲಿ ಅವು ಬಹು ವಿಶೇಷವಾಗಿರುತ್ತವೆ. 1876ರಲ್ಲಿ, ಅಲೆಕ್ಸ್ಯಾಂಡರ್ ಗ್ರಂಬೆಲ್ ರಾಸಾಯನಿಕವನ್ನು ತನ್ನ ಬಟ್ಟೆಗಳ ಮೇಲೆ ಚೆಲ್ಲಿಕೊಂಡವನಾಗಿ, ತಾನು ನೂತನವಾಗಿ ಕಂಡುಹಿಡಿದಿದ್ದ, ಟೆಲಿಫೋನಿನ ಮುಖಾಂತರ ಮೊದಲ ಸಂದೇಶವನ್ನು ರವಾನಿಸಿದ್ದನು: "ಆ ಸಂದೇಶ ವೇನೆಂದರೆ ಮಿಸ್ಟರ್ ವ್ಯಾಟ್‌ಸನ್, ನಿನ್ನ ಅಗತ್ಯ ನನಗಿರುವದರಿಂದ, ನನ್ನ ಬಳಿಗೆ ಬಾ ಎಂಬುದೆ." 1938ರಲ್ಲಿ, ಉರಿಯುತ್ತಿರುವ ಬೆಂಕಿಯ ನಡುವೆ, NBC "ಮೊಬೈಲ್ ಟೆಲಿವಿಶನ್" ಕಂಡು ಹಿಡಿಯಲ್ಪಟ್ಟು, ಮೊದಲನೆಯದಾಗಿ ಕಣ್ಣಿಗೆ ಕಾಣುವ ದೃಶ್ಯವನ್ನು ನೇರ ಪ್ರಸಾರಮಾಡಲಾಯಿತು. 1951ರಲ್ಲಿ, IBM ತನ್ನ ಮೊದಲ ಕಂಪ್ಯೂಟರನ್ನು ಪರಿಚಯಿಸಿದರು, ಅದರಿಂದ ಪ್ರಪಂಚದ ವ್ಯವಹಾರಗಳು ಕುದುರಿಕೊಂಡವು. 1969ರಲ್ಲಿ ಚಂದ್ರನಲ್ಲಿ ಪ್ರಥಮವಾದ ಹೆಜ್ಜೆಯನ್ನು ಇಟ್ಟ ನೀಲ್ ಅರ್ಮ್‌ಸ್ಟ್ರಾಂಗ್‌ನನ್ನು ನೋಡಿದ ದೃಶ್ಯವು ನಮಗೆ ಅಚ್ಚರಿ ಮೂಡಿಸಿದವು.

ವೈಯಕ್ತಿಕವಾಗಿ ಉಂಟಾಗುವ "ಪ್ರಥಮ" ಘಟನೆಗಳು ಪ್ರಮುಖವೆ. ನನ್ನ ಹೆಂಡತಿಯಾದ "ಜೋಳನ್ನು" ಪ್ರಥಮವಾಗಿ ನೋಡಿದಾಗ, ಆ ವಿಶೇಷ ದಿವಸಗಳನ್ನು ನಾನು ಪುನಃ ನೆನಪುಮಾಡಿಕೊಳ್ಳುತ್ತೇನೆ. ನನ್ನ ಮೂರು ಜನ ಪುತ್ರಿಯರನ್ನು ಪ್ರಥಮವಾಗಿ ನೋಡಿದಂತ ಆ ಸಂದರ್ಭವನ್ನು ನೆನಪು ಮಾಡಿಕೊಳ್ಳುತ್ತೇನೆ, ಮತ್ತು ನನ್ನ ಮೊಮ್ಮಕ್ಕಳನ್ನೂ ನೆನಪು ಮಾಡುತ್ತೇನೆ. ಮೊದಲನೆಯದಾಗಿ ನೋಡಿದ ವಿಷಯಗಳ ಪಟ್ಟಿಗೆ, ನನ್ನ ವಾಹನ, ನನ್ನ ಸಂದೇಶ, ಮತ್ತು ಪ್ರಥಮ ಸಾರಿ ಸೇವಿಸಿದ ಫಿಟೋಸ್ ಮತ್ತು ಡಾ. ಪೆಪ್ಪರ್ ಅನ್ನು ಸೇರಿಸುತ್ತೇನೆ.

ಮೊದಲ ಕಾರ್ಯಗಳು ಗುರುತರವಾದವೆ; ಇತರೆ ಕಾರ್ಯಗಳು ಹೆಚ್ಚು ಸಮಂಜಸವಾಗುವದಿಲ್ಲ. ತೀವ್ರವಾದ, "ಮೊದಲ" ಎಂಬ ಪದವನ್ನು ಅಪೊಸ್ತಲರ ಕೃತ್ಯಗಳು 11:26ರಲ್ಲಿ ನೋಡುತ್ತೇವೆ: "... ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು *ಮೊದಲು* ಬಂತು." (ಒತ್ತಿ ಹೇಳಿದ್ದು ನನ್ನದು.) ಪ್ರಖ್ಯಾತಿಗೊಂಡ ನಾಮಾಂಕಿತವಾದ "ಕ್ರೈಸ್ತರು" ಎಂಬ ಹೆಸರನ್ನು ಆದಿ ಸಭೆಯಲ್ಲಿ ಪ್ರಚಲಿತಪಡಿಸಿಕೊಂಡಿರಲಿಲ್ಲ. ಅದರ ಮೂಲವಾದರೂ ಯಾವುದು? ಅದು *ಅಂತಿಯೋಕ್ಯದಲ್ಲಿಯೇ* ಏಕೆ ಉದ್ಭವಿಸಿತು? ಈ ಹಲವಾರು ಪ್ರಶ್ನೆಗಳನ್ನು ಈ ಪಾಠದಲ್ಲಿ ಅಧ್ಯಯನ ಮಾಡುತ್ತೇವೆ.

ನಮ್ಮ ಅಧ್ಯಯನವು ಅಂತಿಯೋಕ್ಯದ ಪ್ರದೇಶಗಳಿಗೆ ಸೀಮಿತವಾಗಿರುತ್ತದೆ.[1] 11:19-30ರವರೆಗೆ, ಯೆರೂಸಲೇಮಿನಿಂದ, ಅಂತಿಯೋಕ್ಯಕ್ಕೆ ವರ್ಗಾವಣೆಯಾದ ಸಭಾ ಕ್ರಿಯೆಗಳ ಕುರಿತು ಲೂಕನು ತಿಳಿಸಿರುವನು. ಅಧ್ಯಾಯ 13ರಿಂದ, ಪೌಲನು ತನ್ನ ಸೇವಾ ಪ್ರಯಾಣಕ್ಕೆ ಅಂತಿಯೋಕ್ಯವನ್ನು ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡನು.

ದೇವರ ಸೇವೆಯ ಚಟುವಟಿಕೆಗಳನ್ನು ಮಾಡಲು, ಒಂದು ಪಟ್ಟಣವನ್ನು ಆಯ್ಕೆ ಮಾಡಿಕೊಳ್ಳಬೇಕಾಗಿದ್ದರೆ, ನಾವುಗಳು ಖಂಡಿತವಾಗಿಯೂ ಅಂತಿಯೋಕ್ಯವನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ. ಸಿರಿಯದಲ್ಲಿದ್ದ, ಅಂತಿಯೋಕ್ಯವು ಒಂದು ಪ್ರಮುಖ ಪಟ್ಟಣವಾಗಿತ್ತು, ಸೆಲೆಯೂಕಸ್ ನಿಕೇಟರ್[2] ಎಂಬಾತನು ಅದನ್ನು ಕಂಡು ಹಿಡಿದು ತನ್ನ ತಂದೆಯ ಹೆಸರಿನಲ್ಲಿ "ಅಂತಿಯೋಕ್ಯ" ಎಂದು ಕರೆದನು. ಪ್ರಪಂಚದಲ್ಲಿ[3] ಮೂರನೆಯ ಪ್ರಮುಖ

ಪಟ್ಟಣವಾಗಿದ್ದು, ರಾಜಕೀಯ ಹಾಗೂ ವಾಣಿಜ್ಯ ಪಟ್ಟಣವಾಗಿತ್ತು.[4] ಹಾಗೂ ದೈವ ಭಕ್ತಿಯಿಲ್ಲದ ಪ್ರಮುಖ ಪಟ್ಟಣವೂ ಆಗಿತ್ತು, ಕೊರಿಂಥವು ಪ್ರಥಮ ಪಟ್ಟಣವಾಗಿತ್ತು. ಪಟ್ಟಣದ ದಕ್ಷಿಣದಲ್ಲಿ ದಾಫೇನನ ಗುಡಿಯಿತ್ತು, ಅಲ್ಲಿ "ಆರಾಧಕರು" ಎಂದು ಹೇಳಿಕೊಳ್ಳುವರು, ದಾಫೇನನ ಬದಲಾಗಿ, ಅವನ ಸ್ತ್ರೀ ಪೂಜಾರಿಗಳನ್ನು ಹಟ್ಟಿಸಿಕೊಂಡು ಹೋಗುವ ಮೂಲಕ, ಗ್ರೀಕರ ಪ್ರಮುಖ ದೇವತೆಯಾದ "ಅಪೋಸ್ತಲನನ್ನು" ಪ್ರತಿಷ್ಠಾಪಿಸಿಕೊಂಡರು (ಅವರೊಂದಿಗೆ ವ್ಯಭಿಚಾರ ಮಾಡಿದರು[5]). ಅಂತಿಯೋಕ್ಯದ ಅನೀತಿಯು ಎಷ್ಟತ್ತೆಂದರೆ, ರೋಮಾಯವು ಬಿದ್ದು ಹೋದಾಗ, ಒಬ್ಬ ಪದ್ಯರಚನೆಗಾರನು ಬರೆದು ಒರೆಂಟೋದ ಕೊಚ್ಚೆಯ ನೀರು ಟೈಬಿಲ್ ನದಿಯನ್ನು ಸೇರಿತು ಎಂದು ಬರೆದಿರುವನು. (ಅಂತಿಯೋಕ್ಯವು ಓರಂಟೊ ನದಿ ತೀರದಲ್ಲಿತ್ತು, ಟೈಬಲ್ ನದಿ ತೀರದಲ್ಲಿ ರೋಮಾ ಸ್ಥಾಪಿತವಾಯಿತು.) ಅದು ಬಳಹ ದೊಡ್ಡದಾಗಿತ್ತು ಮತ್ತು ಅನೇಕ ವಸ್ತುಗಳಿಂದ ತುಂಬಲ್ಪಟ್ಟಿತು, ಅತಿ ಭ್ರಷ್ಟತೆಯು ಅಲ್ಲಿ ತಾಂಡವಾಡುತ್ತಿತ್ತು, ಯೆರೂಸಲೇಮಿಗಿಂತಲೂ ಅಂತಿಯೋಕ್ಯವು ನಾಸ್ತಿಕತೆಯನ್ನು ಹೊಂದಿತ್ತು. ಹೇಗೂ ದೇವರ ದೃಷ್ಟಿಯಲ್ಲಿ, ಅಪೊಸ್ತಲರ ಕೃತ್ಯದ ನಂತರದ ಅರ್ಧಭಾಗದಲ್ಲಿನ, ದೇವರ ಯೋಜನೆಗಳು, ಅಂತಿಯೋಕ್ಯದಲ್ಲಿಯೇ ಪ್ರಾರಂಭವಾಯಿತು. ಅಂತಿಯೋಕ್ಯವು ದೇವರ ಸತ್ಯವು ಪ್ರಚಾರದ ಸ್ಥಳವಾಯಿತು: ಅಲ್ಲಿಂದಲೇ ಎಲ್ಲರಿಗೂ ಸುವಾರ್ತೆಯು ಸತ್ಯವಾಯಿತು!

ಈಗಾಗಲೇ ನಾವು ಅಂತಿಯೋಕ್ಯದಲ್ಲಿ ನಡೆದ ಒಂದು "ಮೊದಲನೆಯ" ಘಟನೆಯ ಕುರಿತು ತಿಳಿಸಿದ್ದೇವೆ. ನಮ್ಮ ಅಧ್ಯಯನವನ್ನು ಮುಂದುವರಿಸುವಾಗ, ಈ ಸಿರಿಯ ಪಟ್ಟಣದಲ್ಲಿ ಉದ್ಭವವಾದ ಇತರ ಗುರುತರ ವಿಷಯಗಳನ್ನು ನೋಡೋಣ.

## ಮೊದಲನೆಯ ಸಾರಿ, "ಎಲ್ಲರಿಗೂ" ಇರುವ ಸುವಾರ್ತೆಯನ್ನು ಎಲ್ಲರಿಗೂ ಸಾರೋಣವಾಯಿತು (11:19, 20)

ಅಧ್ಯಾಯ 8ರಲ್ಲಿ ನೇತಾಡುತ್ತಿದ್ದ ದಾರವನ್ನು, ಲೂಕನು 11:19ರಲ್ಲಿ ಹಿಡಿದುಕೊಂಡನು. 8:1, 4ರಲ್ಲಿ ಓದುವಂತೆ,

> ಅನ್ಯಜನರು ಸಹ ದೇವರ ವಾಕ್ಯವನ್ನು ಅಂಗೀಕರಿಸಿದರೆಂಬ ಸಮಾಚಾರವನ್ನು ಅಪೊಸ್ತಲರೂ ಯೂದಾಯದಲ್ಲಿದ್ದ ಸಹೋದರರೂ ಕೇಳಿದರು (ವಚನ 1).
>
> ಪೇತ್ರನು ನಡೆದ ಸಂಗತಿಯನ್ನು ಅವರಿಗೆ ಮೊದಲಿಂದ ಕ್ರಮವಾಗಿ ವಿವರಿಸಿ (ವಚನ 4).

ಅಧ್ಯಾಯ 11ನ್ನು ಮಂದುವರಿಸುವ ಮೊದಲು, ಪಾಲಿಸ್ತೇನಿನ ಸುತ್ತಲೂ ಪ್ರಸಂಗಿಸಿದ ಯೋಜನೆಯ ಕುರಿತಾಗಿ ಲೂಕನು ಕೇಂದ್ರಿಕರಿಸಿರುವನು. ಸ್ತೆಫನನ ವಿಷಯದಲ್ಲಿ ಉಂಟಾದ ಹಿಂಸೆಯಿಂದ ಚದರಿಹೋದವರು ಯೆಹೂದ್ಯರಿಗೆ ಹೊರತು ಮತ್ತಾರಿಗೂ ದೇವರ ವಾಕ್ಯವನ್ನು ಹೇಳದೆ ಫೊಯಿನಿಕೆ ಕುಪ್ರ ಅಂತಿಯೋಕ್ಯ ಪ್ರಾಂತಗಳವರೆಗೆ ಸಂಚರಿಸಿದರು (ವಚನ 19ಎ). ಫೊಯಿನಿಕೆಯು, ಹದಿನೈದು ಮೈಲುಗಳ ವಿಸ್ತರಣೆ ಹೊಂದಿದ್ದು, ಮೆಡಿಟೇರಿಯನ್ ಸಮುದ್ರ ತೀರದಲ್ಲಿತ್ತು, ಅದು ಪಾಲಿಸ್ತೇನಿನ ಉತ್ತರ ತುದಿಯಿಂದ ಪ್ರಾರಂಭಗೊಂಡು, 120 ಮೈಲುಗಳಿಗೆ ಉತ್ತರಕ್ಕೆ ವಿಸ್ತರಣೆಗೊಂಡಿತ್ತು.[6] ಕೆಲವು ಸಮಯದಲ್ಲಿ (ಲೂಕನು ತಿಳಿಸಿರುವದಿಲ್ಲ), ಚದರಿಹೋದ ಶಿಷ್ಯರು ಫೊಯಿನಿಕೆಯ ಉತ್ತರಕ್ಕೆ ಹೋದರು, ಅಲ್ಲಿ ಸುವಾರ್ತೆಯನ್ನು ಸಾರಿದರು ಮತ್ತು ಸಭೆಗಳನ್ನು ಸ್ಥಾಪಿಸಿದರು.[7] ಅಲ್ಲಿಂದ ಕೆಲವರು ಸಮುದ್ರ ಮಾರ್ಗದಲ್ಲಿ ಪ್ರಯಾಣಮಾಡಿ, ಸುವಾರ್ತೆ ಪ್ರಸಾರಣಕ್ಕಾಗಿ ಕುಪ್ರ ದ್ವೀಪಕ್ಕೆ ಹೋದರು.[8] ಇನ್ನು ಕೆಲವರು, ಸುವಾರ್ತೆಯನ್ನು ಸಾರಲು, ಉತ್ತರದ ತುದಿಯಲ್ಲಿದ್ದ ಸಿರಿಯಾ ಮತ್ತು ಅಂತಿಯೋಕ್ಯಕ್ಕೆ ಹೋದರು. ಹೇಗೂ ಆ ಸಮಯದಲ್ಲಿ ಯೇಸುವಿನ ಇತರೆ ಅನುಯಾಯಿಗಳಂತೆ, "ಅವರು

ಯೆಹೂದ್ಯರಿಗೆ ಮಾತ್ರ ವಾಕ್ಯವನ್ನು ಹೇಳುತ್ತಿದ್ದರು" (ವಚನ 19ಬಿ).

ನಂತರ ಒಂದು ಗುರುತರವಾದ ಸಂಗತಿಯು ದಕ್ಷಿಣದಲ್ಲಿರುವವರೊಂದಿಗೆ ನಡೆಯಿತು. ಮೊದಲನೆಯ ಬಾರಿ ಅನ್ಯರಿಗೆ ಸುವಾರ್ತೆ ಸಾರಲ್ಪಟ್ಟಿತು. ಅನ್ಯರು ಕ್ರೈಸ್ತ ಸಭೆಯ ಅನ್ಯೋನ್ಯತೆ ಸೇರಿ ಕೊಂಡರು (ಅಪೊಸ್ತಲರ ಕೃತ್ಯಗಳು 10). "ಅನ್ಯ ಜನರೂ ಸಹ ಜೀವ ಹೊಂದಲು, ತಮ್ಮ ಮನಸ್ಸುಗಳನ್ನು ದೇವರ ಕಡೆಗೆ ತಿರುಗಿಸಿಕೊಂಡರೆಂಬ ವರ್ತಮಾನವು ಉತ್ತರದ ದಿಕ್ಕಿಗಳಿಗೂ ಹರಡಿತು" (11:18).[9] ಇದರ ಪರಿಣಾಮವಾಗಿ, "ಅವರಲ್ಲಿ ಕುಪ್ರ ದ್ವೀಪದವರು ಕೆಲವರು, ಕುರೇನ್ಯದವರು.[10] ಕೆಲವರು ಅಂತಿಯೋಕ್ಯಕ್ಕೆ ಬಂದು ಗ್ರೀಕರ ಸಂಗಡಲೂ ಮಾತಾಡಿ ಕರ್ತನಾದ[11] ಯೇಸುವಿನ[12] ವಿಷಯವಾದ ಸುವಾರ್ತೆಯನ್ನು ತಿಳಿಸಿದರು" (ವಚನ 20). ಗ್ರೀಕ್ ಭಾಷೆಯನ್ನು ಮಾತನಾಡುತ್ತಿದ್ದ ಅನ್ಯರನ್ನು "ಗ್ರೀಕರು" ಎಂದು ಕರೆ ಯುತ್ತಿದ್ದರು.[13] ದಾಖಲೆಗಳ ಪ್ರಕಾರ, ಮೊದಲ ಬಾರಿಗೆ ಜನರು ಅನ್ಯರಿಗೆ ಸುವಾರ್ತೆ ಸಾರಲು ತೀವ್ರವಾಗಿ ಮುಂದಾದರು. (ಪೇತ್ರನನ್ನು ಹೊರತು ಪಡಿಸಿ, *ದೇವರೇ* ಕೊರ್ನೇಲ್ಯನಿಗೆ ಪೇತ್ರನ ಮೂಲಕ ಮಾತನಾಡಿದ್ದನ್ನು ನೆನಪಿಸಿಕೊಳ್ಳಿರಿ.) ಆ ಸುವಾರ್ತೆ ಸೇವೆ ಮಾಡಿದವರ ಹಿನ್ನೆಲೆ[14] ಏನೇ ಇದ್ದರೂ, ಅವರ ಹೆಸರುಗಳನ್ನು ತಿಳಿಸಿರುವದಿಲ್ಲ - ಆದರೆ ದೇವರು ತಿಳಿದಿರುವನು. ಕಳೆದು ಹೋದ ಪಾಪಿಗೆ ವಾಕ್ಯ ಸಾರುವದು ಪ್ರಮುಖವಾಗಿದೆ ಹೊರತು; ಆದರಿಂದ ಉಂಟಾಗುವ ಲಾಭವು ಪ್ರಮುಖವಲ್ಲ.

## ಮೊದಲ ಬಾರಿಗೆ "ಎಲ್ಲರಿಗಾಗಿ" ಒಂದು ಸಭೆಯು ಸ್ಥಾಪನೆಗೊಂಡಿತು (11:21)

ಹೆಸರುಗಳು ದಾಖಲಾಗದಿರುವ ಮನುಷ್ಯರು, ಅಂತಿಯೋಕ್ಯದ ಅನ್ಯರಿಗೆ ಸುವಾರ್ತೆಯನ್ನು ಹಂಚಿಕೊಂಡಾಗ, ದೇವರು ಅವರ ಪ್ರಯತ್ನಗಳನ್ನು ಆಶೀರ್ವದಿಸಿದನು. "ಕರ್ತನ ಹಸ್ತವು ಅವರಿಗೆ ಸಹಾಯವಾಗಿತ್ತು" (ವಚನ 21ಎ). ಈ ಹಳೇ ಒಡಬಡಿಕೆಯ ಹೇಳಿಕೆಯು ದೈವೀಕ ರುಜುವಾತಿನ ಸೂಚೆಯಾಗಿತ್ತು. ಎಂದು ಲೂಕನು ತಿಳಿಸಿರುವನು (13:11; ಹೋಲಿಸು ಲೂಕ 1:66). ಕೆಲವು ಸಮಯದಲ್ಲಿ ಮಹತ್ಕಾರ್ಯಗಳ ಮೂಲಕ ಅದು ರುಜುವಾತಾಗುತ್ತದೆ (4:30); ಇಲ್ಲಿ ಇದೇ ವಿಧವಾದ ಕಾರ್ಯವು ನಡೆದಿತ್ತು.[15]

ದೇವರು ಅವರ ಸುವಾರ್ತೆ ಪ್ರಸಂಗವನ್ನು ಆಶೀರ್ವದಿಸಿದ ನಂತರ, "ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು" (ವಚನ 21ಬಿ). ಅವರು ವಿಗ್ರಹ ಆರಾಧನೆಗೆ ಬೇಸರಗೊಂಡು "ಬಹುಜನರಾದ ಅನ್ಯರು" ವಾಕ್ಯವನ್ನು "ನಂಬಿ" "ಕರ್ತನ ಕಡೆಗೆ ತಿರುಗಿಕೊಂಡರು"[16] ಕೊರ್ನೇಲ್ಯನ ಮತ್ತು ಅವನ ಮನೆಯವರಂತೆ (10:48) - ಮತ್ತು ಕರ್ತನಿಗೆ ಸೇರಿಕೊಳ್ಳುವದಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರು (ಗಲಾತ್ಯ 3:26, 27) ಮತ್ತು ದೇವರು ಅವರನ್ನು ಸಭೆಗೆ ಸೇರಿಸಿದನು.[17]

ಇತರೆ ಸಭೆಗಳು ಸ್ಥಾಪನೆಗೊಂಡದಂತೆ, ಒಂದು ಹೊಸ ಸಭೆಯು ಸ್ಥಾಪನೆ ಗೊಂಡಿತು. ಅದು ಪೂರ್ಣವಾದ ಅನ್ಯರ ಸಭೆಯಾಗಿತ್ತು.[18] ಆದಾಗ್ಯೂ ಅದರಲ್ಲಿ ಯೆಹೂದ್ಯ ಸದಸ್ಯರೂ ಇದ್ದರು.[19] ಯೆಹೂದ್ಯರು ಹಾಗೂ ಅನ್ಯರು ಸಭೆಯಲ್ಲಿ ಒಟ್ಟಾಗಿ ಕೂತುಕೊಳ್ಳುತ್ತಿದ್ದರು. ಅವರು ಒಟ್ಟಾಗಿ ಪ್ರಸಂಗವನ್ನು ಕೇಳಿದರು, ಪ್ರಾರ್ಥನೆ ಮಾಡಿದರು, ಒಟ್ಟಾಗಿ ದೇವರನ್ನು ಸ್ತುತಿಸಿದರು, ಕರ್ತನ ಭೋಜನದಲ್ಲಿ ಪಾಲುದಾರರಾದರು. ಮೊದಲನೆಯ ಸಾರಿ ಸಭೆಯಲ್ಲಿ ಯೆಹೂದ್ಯರು ಮತ್ತು ಅನ್ಯರು ಒಂದುಗೂಡಿ ಆರಾಧಿಸಿದರು, ಕಾರ್ಯನಿರ್ವಹಿಸಿದರು, ಊಟಮಾಡಿದರು. ಒಂದು ಕಡೆ ಯೆಹೂದ್ಯರು, ಇನ್ನೊಂದು ಬದಿಯಲ್ಲಿ ಅನ್ಯರು ಎಂಬ ಭೇದಭಾವವು ಇಲ್ಲದಂತಾಯಿತು. ಕ್ರಿಸ್ತನು ಅವರ ಮಧ್ಯದಲ್ಲಿದ್ದ ಗೋಡೆಯನ್ನು ಕೆಡವಿ ಹಾಕಿದ್ದನಲ್ಲವೇ? ಯೇಸು ಅವರನ್ನು *ಒಂದಾಗಿ* ಮಾಡಲಿಲ್ಲವೇ? (ನೋಡಿರಿ ಎಫೆಸ 2:15, 16; ಗಲಾತ್ಯ 3:26-28.)

## ಮೊದಲ ಬಾರಿಗೆ ಯೆಹೂದ್ಯರ ಚಿಂತನೆಯು "ಎಲ್ಲರಿಗಾಗಿ" ಪ್ರಾಯೋಜಿಸಲಾಯಿತು (11:22-24)

ಪೇತ್ರನು ಅನ್ಯರಿಗೆ ಪ್ರಸಂಗ ಮಾಡಿದ ಸಂಗತಿಯು ಉತ್ತರದಲ್ಲಿದ್ದವರಿಗೆ ತಿಳಿದಾಗ, ಅನ್ಯರ ಸಭೆಯು ಸಂಸ್ಥಾಪನೆಗೊಂಡ ವರ್ತಮಾನವು ದಕ್ಷಿಣದ ಕಡೆಗೆ ಹರಡಿತು, "ಇವರ ವಿಷಯವಾದ ವರ್ತಮಾನವು ಯೆರೂಸಲೇಮಿನಲ್ಲಿದ್ದ ಸಭೆಯವರ ಕಿವಿಗೆ ಬಿದ್ದಿತು" (ವಚನ 22ಎ). ಈ ಹಿಂದೆ, ಸಮಾರ್ಯದವರು ಸುವಾರ್ತೆಯನ್ನು ಅಂಗೀಕರಿಸಿದರು ಎಂಬ ವರ್ತಮಾನವನ್ನು ಅಪೊಸ್ತಲರು ಕೇಳಿದಾಗ, ಅವರು ಪೇತ್ರ ಮತ್ತು ಯೋಹಾನರನ್ನು ಅವರಲ್ಲಿಗೆ ಕಳುಹಿಸಿದರು (8:14). "ಅವರು ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಿದರು" (11:22ಬಿ).[20]

ಸಾಮಾನ್ಯವಾಗಿ, ಅನ್ಯರ ಸಭೆಯು ಸಂಸ್ಥಾಪನೆಗೊಂಡ ಸಂಗತಿಯು ತಿಳಿದಾಗ ಅಲ್ಲಿ ಉಂಟಾದ ಗೊಂದಲದ ಕುರಿತು ಯೆರೂಸಲೇಮಿನ ಸಭೆಗೆ ನಿಮಿತ್ತ ಆ ಪರಿಸ್ಥಿತಿಯನ್ನು ಪರಿಶೀಲಿಸಲು ಬಾರ್ನಬನನ್ನು ಕಳುಹಿಸಿಲಾಯಿತು. ಬಹುಶಃ ಯೆರೂಸಲೇಮಿನ ಸಭೆಯವರಲ್ಲಿ ಕೆಲವರು ಗೊಂದಲ ಕ್ಕೊಳಗಾಗಿರಬಹುದು (ಉದಾಹರಣೆ, "ಸುನ್ನತಿಯುಳ್ಳವರ ಗುಂಪಿನಲ್ಲಿ" 11:2). ಯೆರೂಸಲೇಮಿನ ಸಭೆಯ ನಾಯಕರುಗಳು ಅವರನ್ನು ಸಮಾಧಾನ ಪಡಿಸಲು ಯತ್ನಿಸಿರಬಹುದು, ಬಾರ್ನಬನನ್ನು ಕಳುಹಿಸಿದರ ಕಾರಣ ಇದೇ ಇರಬಹುದು ಎಂಬ ಸಂದೇಹ. ನಾನು ಸಹ ಸಂದೇಹಿಸುತ್ತೇನೆ ಯಾಕೆಂದರೆ, ಇತ್ತೀಚೆಗಷ್ಟೆ, ಕೊರ್ನೇಲ್ಯನು ಮತ್ತು ಅವನ ಮನೆಯವರಿಗೆ ಮಾತ್ರವಲ್ಲದೆ, ಅನ್ಯರಿಗೂ ಕರ್ತನ ಕೃಪೆ ಉಂಟಾದ್ದರಿಂದ ಯೆರೂಸಲೇಮಿನ ಕ್ರೈಸ್ತರೆಲ್ಲರೂ ಒಟ್ಟಾಗಿ "ದೇವರನ್ನು ಮಹಿಮೆ ಪಡಿಸಿದ್ದರು ಸಾಮಾನ್ಯವಾಗಿ ಅವರು *ದೇವರಕಡೆಗೆ* ತಿರುಗಿ ಕೊಂಡಿದ್ದರು" (11:18; ಒತ್ತಿ ಹೇಳಿದ್ದು ನನ್ನದು). ಮತ್ತು ಅವರು ಕಳುಹಿಸಿದ ಮನುಷ್ಯನು "ಪರಿಶೀಲಿಸುವ ವ್ಯಕ್ತಿಯಾಗಿರಲಿಲ್ಲ" ದೇವರ ಸಭೆಯಲ್ಲಿ ಉನ್ನತವಾದ ಹೃದಯವನ್ನು ಹೊಂದಿದ್ದ ಮನುಷ್ಯನನ್ನೇ ಅವರು ಕಳುಹಿಸಿದ್ದರು, ಅವನು ಪ್ರತಿ ಮನುಷ್ಯನಲ್ಲೂ, ಪ್ರತಿ ಸಂದರ್ಭದಲ್ಲೂ ಒಳ್ಳೇಯದನ್ನೇ ಗಮನಿಸುವವನಾಗಿದ್ದನು, ಅವನು ಸಂಪ್ರದಾಯದ ವ್ಯಕ್ತಿಯಾಗಿರದೆ, ಪ್ರೀತಿಯುಳ್ಳವನಾಗಿದ್ದನು. ಆದರೂ ಅವರು ಬಾರ್ನಬನನ್ನು ಕಳುಹಿಸಿದರು (4:36; 9:26, 27). ಅಂತಿಮವಾಗಿ ನನ್ನ ಸಂದೇಹವೇನೆಂದರೆ, ಅವನು ಅಲ್ಲಿ ಸೇರಿದಾಗ ಯಾವ ಕಾರ್ಯವನ್ನು ಮಾಡಿರಬಹುದೆಂಬ ವಿಷಯದಲ್ಲಿ ನಾವು ಅಧ್ಯಾಯ 3ನ್ನು ಧ್ಯಾನಿಸುವಾಗ, ಪೇತ್ರನು ಮತ್ತು ಯೋಹಾನನು ದೇವಾಲಯಕ್ಕೆ ಹೋದ ನಂತರ, ಅವರು ಅಲ್ಲಿಗೆ ಹೋದ ಉದ್ದೇಶವನ್ನು ಕಂಡುಕೊಂಡರು.[21] ಅದೇ ರೀತಿಯಲ್ಲಿ, ಬಾರ್ನಬನು ಅಂತಿಯೋಕ್ಯಕ್ಕೆ ಸೇರಿದ ನಂತರ ಅದರ ಉದ್ದೇಶವನ್ನು ಕಂಡುಕೊಂಡನು. ಅವನು ಕೆಲಸವನ್ನು ಪರಿಶೀಲಿಸಿ ನಂತರ ಅದರ ಫಲಿತಾಂಶವನ್ನು ಯೆರೂಸಲೇಮಿಗೆ ಕಳುಹಿಸಲಿಲ್ಲ ಅದರ ಬದಲಾಗಿ, ಅವನು ಅವರೆಲ್ಲರನ್ನು *ಪ್ರೋತ್ಸಾಹಿಸಿದನು* (ವಚನ 23).

ಯೆರೂಸಲೇಮಿನವರು ಪ್ರೀತಿ ಮತ್ತು ಅವರ ಸಹಾಯದ ಧೋತಕವಾಗಿ, ಬಾರ್ನಬನನ್ನು ಅಂತಿಯೋಕ್ಯಕ್ಕೆ ಕಳುಹಿಸಿದರು. ಗಳಿಗೆದಲಿದ ಅಂತಿಯೋಕ್ಯದ ಸಭೆಯವರಿಗೆ ಇವರ ಪ್ರೋತ್ಸಾಹವಿದೆ ಎಂದು ತೋರ್ಪಡಿಸಿದರು. ಅದರಿಂದ, ಆ ಕೆಲಸಕ್ಕೆ ಯೋಗ್ಯನಾದ ಮನುಷ್ಯನನ್ನು ಅವರಲ್ಲಿಗೆ ಕಳುಹಿಸಿದರು.[22] ಬಾರ್ನಬನು ಕುಪ್ರದಲ್ಲಿ ಹುಟ್ಟಿದ ಕಾರಣ (4:36), ಅಂತಿಯೋಕ್ಯವು ಅವನಿಗೆ ಪರಿಚಯವಿದ್ದ ಸ್ಥಳವಾಗಿತ್ತು. ಬಹುಶಃ ಅಂತಿಯೋಕ್ಯದಲ್ಲಿದ್ದರು ಅವನ ಕುಪ್ರದ ಸ್ನೇಹಿತರಾದ್ದರಿಂದ ಅಲ್ಲಿಗೆ ಹೋಗಿರಬಹುದು, ಹಾಗೂ ಅವನು ಯೆಹೂದ್ಯ ಮತಾವಲಂಭಿಯೂ, ಆಗಿದ್ದರಿಂದ, ಅಂತಿಯೋಕ್ಯದವರ ಬಹುತ್ವದ ಸಮಸ್ಯೆಗಳನ್ನು ಅರಿತವನಾಗಿದ್ದನು.[23] ಬಾರ್ನಬನನ್ನು ಅಲ್ಲಿಗೆ ಕಳುಹಿಸಿದ ವಿಷಯವು ಯೆರೂಸಲೇಮಿನ ಸಭೆಯವರ ಆತ್ಮೀಕ ತಂತ್ರವಾಗಿತ್ತು.[24]

ವಚನ 23ರಲ್ಲಿ "ಆದಕಾರಣ ಅವನು ಅಲ್ಲಿಗೆ [ಅಂತಿಯೋಕ್ಯಕ್ಕೆ] ಬಂದು ದೇವರ ಕೃಪಾ[25] ಕಾರ್ಯವನ್ನು ನೋಡಿದಾಗ ಸಂತೋಷಪಟ್ಟನು" (ವಚನ 23ಎ). ಅನ್ಯರಲ್ಲಿದಂತ ಸ್ವೀಕರಿಸುವ ಗುಣವನ್ನು ಬಾರ್ನಬನು ನೋಡಿದಾಗ, ಮತ್ತು ಯೆಹೂದ್ಯರ ಹಾಗು ಅನ್ಯರ ನಡುವಿನ ಪ್ರೀತಿಯನ್ನು ಗಮನಿಸಿದಾಗ, ಅವನು ಉತ್ಸಾಹಭರಿತನಾದನು. ಅವರು ಒಂದು ಉತ್ತಮವಾದ ಆರಂಭವನ್ನು ಮಾಡಿದ್ದರು, ಆದ್ದರಿಂದ: "ನೀವು ದೃಢಮನಸ್ಸಿನಿಂದ[26] ಕರ್ತನಲ್ಲಿ ನೆಲೆಗೊಂಡಿರ್ರಿ ಎಂದು ಅವರೆಲ್ಲರಿಗೆ ಬುದ್ಧಿ ಹೇಳಿದನು" (ವಚನ 23ಬಿ).[27] ಪ್ರಾರಂಭಮಾಡುವಂಥದ್ದು ಒಂದು ಹಂತವಾದರೆ, ಅದನ್ನು ಕಾಪಾಡುವದು ಇನ್ನೊಂದು ಹಂತವಾಗಿರುತ್ತದೆ.

ವಚನ 24ರಲ್ಲಿ ಬಾರ್ನಬನ ಆತ್ಮಿಕ ಚರಿತ್ರೆಯನ್ನು ನೋಡುತ್ತೇವೆ: "ಅವನು ಒಳ್ಳೆಯವನು ಪರಿಶುದ್ಧಾತ್ಮಭರಿತನೂ ನಂಬಿಕೆಯಿಂದ ತುಂಬಿದವನೂ ಆಗಿದ್ದನು." ಅಪೊಸ್ತಲರ ಪುಸ್ತಕದಲ್ಲಿ, ಅನೇಕ ಒಳ್ಳೆಯ ಜನರನ್ನು ಸೇರಿಸಲಾಗಿದೆ, ಆದರೆ ಲೂಕನು ಬಾರ್ನಬನ ಕುರಿತಾಗಿ ಮಾತ್ರ *"ಒಳ್ಳೆಯವನು"* ಎಂದು ತಿಳಿಸಿರುವನು. ಅವನನ್ನು ನೋಡಿದವರು, "ಅವನನ್ನು ಒಳ್ಳೆಯವನೆಂದು ಪರಿಗಣಿಸಿದರು" ಅವನು ಪರಿಶುದ್ಧಾತ್ಮಭರಿತನೂ[28] ನಂಬಿಗಸ್ತನೂ: ಯೆಹೂದ್ಯ ಮತಾವಲಂಬಿಯಾಗಿದ್ದನು (6:5). ಬಾರ್ನಬನು ಒಬ್ಬ ಉತ್ತಮವಾದ ವಂಶಪರಂಪರೆಯ ಗುಣಗಳುಳ್ಳವನಾಗಿದ್ದನು.

ವಚನ 24ರ ಅಂತ್ಯದಲ್ಲಿ ಬಾರ್ನಬನಿಂದ ಉತ್ತೇಜನದ ಫಲವು ಉಂಟಾಯಿತು ಎಂದು ತಿಳಿಸಲಾಗಿದೆ: "ಆಗ ಬಹುಮಂದಿ ಕರ್ತನಿಗೆ ಸೇರಿಕೊಂಡರು" ಅವನಲ್ಲಿ ಸಭೆಯ ಆತ್ಮೀಕ ವೃದ್ಧಿಯ *ಉದ್ದೇಶವಿದದ್ದರಿಂದ,* ಸಭೆಯು ಸಂಖ್ಯೆಯಲ್ಲಿಯೂ ವೃದ್ಧಿಯಾಯಿತು. ಬಹುಶಃ ನಾವು ಸಂಖ್ಯೆಯಲ್ಲಿ ವೃದ್ಧಿಯಾಗದೆ ಇರುವದಕ್ಕೆ ಆತ್ಮೀಕ ಕುಂಟಿತವೇ ಕಾರಣವಾಗಿರಬಹುದು.

## ಮೊದಲನೆಯ ಸಾರಿ "ಎಲ್ಲರಿಗಾಗಿ" ಎಂಬುದನ್ನು ಅಪೊಸ್ತಲನು ಪ್ರಾಯೋಜಿಸಿದನು (11:25, 26)

ಅಂತಿಯೋಕ್ಯದ ಕೆಲವು ಯಶಸ್ವಿಯ ಕಡೆಗೆ ಸಾಗುವಾಗ, ಬಾರ್ನಬನು, "ಸೌಲನನ್ನು ಹುಡುಕುವದಕ್ಕಾಗಿ ತಾರ್ಸಕ್ಕೆ ಹೋದನು" (ವಚನ 25). 9ನೇ ಅಧ್ಯಾಯದಲ್ಲಿ ಕಡೆಯದಾಗಿ ಪೌಲನ ಕುರಿತು ನೋಡಿದ್ದೇವೆ. ಅಲ್ಲಿನ ಯೆಹೂದ್ಯ ಮತಾವಲಂಭಿಗಳು ಅವನನ್ನು ಕೊಲ್ಲಲು ಯತ್ನಿಸಿದಾಗ, ಸಹೋದರರು ಅವನು ತಾರ್ಸಕ್ಕೆ ತಪ್ಪಿಸಿಕೊಳ್ಳುವಂತೆ ಮಾಡಿದ್ದರು. ಅಲ್ಲಿ ಅವನು ರಹಸ್ಯವಾಗಿ ಸುಮಾರು ಏಳು ವರ್ಷಕ್ಕಿಂತ ಹೆಚ್ಚಾಗಿ ಸೇವೆ ಮಾಡಿದ್ದನು. ಈ ಬಾರ್ನಬನು ಅವನನ್ನು ಸಂಧಿಸಲು ನೂರು ಮೈಲಿಗಳ ಅಂತರವನ್ನು ಕ್ರಮಿಸಿದ್ದನು.

ಅನೇಕರ ಅಭಿಪ್ರಾಯದಂತೆ, ಬಾರ್ನಬನು ಅಂತಿಯೋಕ್ಯದ ಸೇವೆಯಲ್ಲಿ ಪ್ರೋತ್ಸಾಹಗೊಂಡವನಾಗಿ, ಪೌಲನ ಸಹಾಯಕ್ಕಾಗಿ ಮುಂದಾಗಿರಬಹುದು ಎಂಬದೆ. ಹೇಗೂ ಅಂತಿ ಯೋಕ್ಯದಲ್ಲಿ ಬಾರ್ನಬನೊಬ್ಬನೇ ಹೊರತಾಗಿರಲಿಲ್ಲ; ಅಲ್ಲಿನ ಸೇವಾ ಭಾರವು ಅವನ ಮೇಲೆ ಮಾತ್ರ ಇರಲಿಲ್ಲ (13:1). ಬಾರ್ನಬನು ಅನ್ಯರ ಸಂಗಡ ಕೆಲಸ ಮಾಡುವಾಗ, ಯೇಸುವಿನಿಂದ ಅನ್ಯರಿಗಾಗಿ ನೇಮಿಸಲ್ಪಟ್ಟ ಒಬ್ಬ ಮನುಷ್ಯನನ್ನು ನೆನಪಿಸಿಕೊಂಡ ಕಾರಣ. ಅವನೇ ಸೌಲನಾಗಿದ್ದನು. ಅವನು (ಒಂದು ಕ್ರಿಯೆಯ ಉದ್ದೇಶದಿಂದ) ತಾರ್ಸಕ್ಕೆ ತಪ್ಪಿಸಿಕೊಂಡಿದ್ದನು. ಬಾರ್ನಬನು, ಉತ್ತೇಜನನಾಗಿದ್ದು, ಅವನ ಉದ್ದೇಶವನ್ನು ಸಾಧಿಸಿಕೊಳ್ಳಲು, ಪೌಲನ ಸಹಾಯ ಬೇಡಿದನು.[29]

ಮೂಲ ಭಾಷೆಯಲ್ಲಿ, "ಸೌಲನಿಗಾಗಿ ಹುಡುಕಿ" ಮತ್ತು "ಅವನನ್ನು ಕಂಡುಕೊಂಡನು" ಎಂಬುದರಲ್ಲಿ ಬಾರ್ನಬನ ಕೆಲಸವು ಸುಲಭವಾಗಿರಲಿಲ್ಲ ಎಂಬ ಸೂಚನೆಯನ್ನು ನೀಡುತ್ತದೆ. ಸೌಲನು ತನ್ನ ಪೂರ್ವಜನರ ಮನೆಯಲ್ಲಿ ವಾಸ ಮಾಡದೆ ಇದ್ದದ್ದರಿಂದ (ಒಂದು ವೇಳೆ

ತಿರಸ್ಕರಿಸಲ್ಪಟ್ಟಿರಬಹುದು) ಮತ್ತು ಅವನು ಬಹಳ ಪ್ರಯಾಣಿಸುತ್ತಿದ್ದರಿಂದ, ಅವನನ್ನು ಹುಡುಕುವದು ಕಷ್ಟಕರವಾಗಿತ್ತು. ಆದರೆ ಬಾರ್ನಬನು ಅವನಿಗಾಗಿ ಹುಡಕುತ್ತಾ, "ಅವನನ್ನು ಕಂಡು ಅಂತಿಯೋಕ್ಯಕ್ಕೆ ಕರೆದು ತಂದನು" (ವಚನ 26ಎ).

ಪೌಲನು, ಅನ್ಯರಿಗೆ ಸುವಾರ್ತೆ ಸಾರಿರುವ ಸ್ಪಷ್ಟತೆ ನಮಗೆ ಇಲ್ಲದೆ ಇದ್ದರೂ, ಕೊರ್ನೇಲ್ಯನ ಅಥವಾ ಅಂತಿಯೋಕ್ಯದವರ ಪರಿವರ್ತನೆಯ ಕುರಿತು ಕೇಳಿರುವ ಸಾಧ್ಯತೆ ಇರಬಹುದು. ಹೇಗೂ, ಅವನು ಅಲ್ಪ ಕೆಲಸವನ್ನು ಮಾಡಿದ್ದನು, ಒಂದು ವೇಳೆ, ಅಂತಿ ಯೋಕ್ಯಕ್ಕೆ ಬರುವ ಮೊದಲು, ಯೆಹೂದ್ಯರಲ್ಲಿ ಕೆಲಸ ಮಾಡಿರಬಹುದು. ಬಾರ್ನಬನು ಮತ್ತು ಅವನು ಅಂತಿಯೋಕ್ಯದ ನಾಗರಿಕರಿಗೆ ಪ್ರಬೋಧನೆ ಮಾಡುವಾಗ, "ಈಗ ನಾನು, ನನಗೆ ನೇಮಿಸಲ್ಪಟ್ಟ ವಿಶೇಷ ಸೇವೆಯನ್ನು ಮಾಡುತ್ತಿರುವೆನು" ಎಂದು ಹೇಳಿರಬಹುದು!

ಬಾರ್ನಬ ಮತ್ತು ಸೌಲರು ಒಳ್ಳೆಯ ಜೊತೆಗಾರರಾದರು. "ಆ ಮೇಲೆ ಅವರು ಪೂರಾ ಒಂದು ವರುಷ ಸಭೆಯವರ ಸಂಗಡ ಕೂಡಿದ್ದು ಬಹು ಜನರಿಗೆ ಉಪದೇಶ ಮಾಡಿದರು" (ವಚನ 26ಬಿ). ಅಕ್ಷರಶಃ, ಅವರು *ಸಭೆಯಲ್ಲಿದ್ದುಕೊಂಡು*, ಬೋಧಿಸಿದರು. ಯೆರೂಸಲೇಮಿನ ಸಭೆಯಂತೆ, ಅಂತಿಯೋಕ್ಯದ ಸಭೆಯಲ್ಲಿಯೂ ಕ್ರಮವಾಗಿ ಸರಿಯಾದ ಸಮಯಕ್ಕೆ ಸೇರುತ್ತಿದ್ದರು. ಈ ಕಾರ್ಯವಾಗುವಾಗ, ಅಲ್ಲಿ ಸಭೆಯು ಮಾತ್ರವಿರದೆ, ಬೋಧನೆ ಗಾಗಿ ತಮ್ಮ ಕುಟುಂಬಗಳನ್ನೂ ಮತ್ತು ಸ್ನೇಹಿತರನ್ನೂ ಕರೆ ತಂದರು. ಆದುದರಿಂದ ಬಾರ್ನಬ ಮತ್ತು ಸೌಲರು "ಬಹು ಜನರಿಗೆ ಉಪದೇಶ ಮಾಡಿದರು" - ಮತ್ತು ಅಂತಿಯೋಕ್ಯದ ಸಭೆಯು ಬೆಳೆದು ಮುಂದುವರಿಯಿತು.

## ಮೊದಲನೆಯ ಸಾರಿ, ಒಂದು ಹೆಸರನ್ನು "ಎಲ್ಲಾ" ಶಿಷ್ಯರಿಗೂ ಎಂದು ಬಳಸಲಾಯಿತು (11:26)

ಈ ಪಾಠದ ಆರಂಭದಲ್ಲಿ ಬಳಸಿರುವ ವಾಕ್ಯದ ಭಾಗಕ್ಕೆ ಇದು ಹಿನ್ನೆಲೆಯಾಗಿರುತ್ತದೆ: "ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ವಚನ 26ಸಿ).[30]

"ಕ್ರೈಸ್ತರು" ಎಂಬುದು ಗ್ರೀಕ್ ಭಾಷೆಯ ಅನುವಾದವಾಗಿರುತ್ತದೆ.[31] "ಕ್ರಿಸ್ತ" ಎಂಬುದು ಅದರ ಮೊದಲ ಭಾಗವಾಗಿದೆ. ಅದರರ್ಥ "ಅಭಿಷೇಕಿಸಲ್ಪಟ್ಟವನು" ಎಂಬುದಾಗಿದೆ. ಅದು ಯೇಸುವಿನ ಪ್ರಮುಖವಾದ ಸೂಚನೆಯಾಗಿದೆ (2:36). "ಅನು" ಎಂಬುದು ಅದರ ಅಂತ್ಯ ಸ್ಥಾನದ ಸೂಚನೆಯಾಗಿದೆ. ಒಂದು ಸ್ವಾಸ್ಥ್ಯವು ಒಬ್ಬರಿಗೆ ಸೇರಿದ್ದಾಗಿದೆ. ಎಂಬ ಪ್ರಾಪಂಚಿಕ ಬರವಣಿಗೆಯಾಗಿದೆ, ಮುಖ್ಯವಾಗಿ ಒಬ್ಬ ಗುಲಾಮನು ಒಬ್ಬ ಯಜಮಾನನಿಗೆ ಸೇರಿ ದವನೆಂಬುದಾಗಿದೆ.[32] "ಕ್ರೈಸ್ತರು" ಅಂದರೆ "ಕ್ರಿಸ್ತನ ಸ್ವಾಸ್ಥ್ಯ" ಎಂಬರ್ಥವಾಗಿದೆ. "ಕ್ರಿಸ್ತನಿಗೆ *ಸೇರಿದವನು*"[33] ಪೌಲನು ಹೇಳಿದ್ದನೆಂದರೆ "ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸ್ವತ್ತಲ್ಲ, ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು: ..." (1 ಕೊರಿಂಥ 6:19, 20)!

"ಕ್ರೈಸ್ತರು" ಎಂಬ ಹೆಸರನ್ನು ಮೊದಲನೆಯದಾಗಿ ಯಾರು ಬಳಸಿದರು? ಸಭೆಯ ವಿರೋಧಿಗಳು ಈ ಹೆಸರನ್ನು ನೀಡಿದರೆಂಬುದು ಅನೇಕ ವಿದ್ವಾಂಸರ ಬರವಣಿಗೆಯಾಗಿದೆ. ಈ ರೀತಿ ಯಾಕೆ ತಿಳಿಯಬೇಕು? ಮೆಕೆಗಾರ್ವೆಯವರ ಅಂಶದಂತೆ, "ಹೆಸರಿನ ಮೂಲಕ ಕೆಳಮಟ್ಟದ ಹಾಗೂ ತಿರಸ್ಕೃತವಾದ ಭಾವವುಂಟಾಗುವದಿಲ್ಲ"[34] ತಾತ್ಸಾರದ ಸೂಚನೆಯಾಗಿ ಶಿಷ್ಯರನ್ನು "ಕ್ರೈಸ್ತರು ಎಂಬುದಾಗಿ *ಕರೆದರು*" ಎಂಬುದು ಕೆಲವರ ಅಭಿಪ್ರಾಯ. ಹೇಗೂ, ಗ್ರೀಕ್ ಭಾಷೆಯ "ಕರೆ" ಎಂಬುದರರ್ಥ ದೇವ*ರಿಂದ* ಕರೆಯಲ್ಪಟ್ಟವರು.[35] ಒಂದು ಅನುವಾದದಲ್ಲಿ "ಅಂತಿಯೋಕ್ಯದಲ್ಲಿ ಶಿಷ್ಯರನ್ನು *ದೈವಿಕವಾಗಿ* ಕ್ರೈಸ್ತರೆಂದು ಪ್ರಥಮವಾಗಿ ಕರೆದರು."[36] (ಒತ್ತಿ ಹೇಳಿದ್ದು ನನ್ನದು.) ಅಂತಿಯೋಕ್ಯದಲ್ಲಿದ್ದ ಒಬ್ಬ ಪ್ರೇರಿತನಾದ ಮನುಷ್ಯನು (13:1) ಈ

ರೀತಿಯಾಗಿ ಕರೆದಿರಬಹುದು; ಆ ವ್ಯಕ್ತಿ ಸೌಲನು ಸಹ ಆಗಿರಬಹುದು, ಸೌಲನು ಅನ್ಯರಿಗೆ ಅಪೊಸ್ತಲನು ಎಂಬುದರಲ್ಲಿ ಈ ಹೇಳಿಕೆಯನ್ನು ಬಳಸಲಾಗಿದೆ: ಅದರ ಮೂಲವು ಹೇಗಾದರೂ ಬಂದಿರಬಹುದು, ಆದರೆ ಒಂದು ವಿಷಯ ಸತ್ಯವಾಗಿದೆ, ಪೇತ್ರನು ತನ್ನ ಬರವಣಿಗೆಯಲ್ಲಿ ಈ ತತ್ವವನ್ನು ಬರೆದು ರುಜುವಾತು ಪಡಿಸಿರುವನು. "ಆದರೆ ಕ್ರೈಸ್ತನಾಗಿ ಬಾಧೆಪಟ್ಟರೆ ಅವನು ನಾಚಿಕೆಪಡದೇ ಆ *ಹೆಸರಿನಿಂದಲೇ* ದೇವರನ್ನು ಘನಪಡಿಸಲಿ" (1 ಪೇತ್ರ 4:16; ಒತ್ತಿ ಹೇಳಿದ್ದು ನನ್ನದು).

ಹೆಸರಿನ ಮೂಲದ ಕುರಿತಾಗಿ "ಯಾರು?" ಮತ್ತು "ಹೇಗೆ?" ಎಂಬ ತರ್ಕಕ್ಕಿಂತಲೂ "ಯಾವಾಗ?" "ಎಲ್ಲಿ?" ಮತ್ತು "ಏಕೆ?" ಎಂಬುದು ಪ್ರಮುಖವಾಗಿದೆ. "ಎಲ್ಲಿ?" ಮತ್ತು "ಯಾವಾಗ?" ಎಂಬುದನ್ನು ಲೂಕನು ತಿಳಿಸಿರುವನು: "ಯಾವಾಗ?" - ಸೌಲನು ಬಾರ್ನಬನೊಂದಿಗೆ "ಒಂದು ವರ್ಷಗಳ ಕಾಲ" ಕೆಲಸ ನಡೆಸಿದ ನಂತರ; "ಎಲ್ಲಿ?" - ಅಂತಿಯೋಕ್ಯದಲ್ಲಿ ಶಿಷ್ಯರನ್ನ ಕ್ರೈಸ್ತರನ್ನು ಮೊದಲನೆಯ ಸಾರಿ ಕರೆದರು. "ಎಲ್ಲಿ?" ಮತ್ತು "ಯಾವಾಗ?" ಎಂಬ ಪದಗಳು ನಮಗೆ ಯೆಶಾಯನು ಆತ್ಮೀಕ ಚಿಯೋನಿನ ಬಗ್ಗೆ ಬರೆದಿರುವ ವಾಕ್ಯವನ್ನು ನೆನಪು ಮಾಡುತ್ತದೆ:[37] "ಜನಾಂಗಗಳು ನಿನ್ನ ಧರ್ಮವನ್ನು, ಸಕಲರಾಜರು ನಿನ್ನ ವೈಭವವನ್ನು ನೋಡುವರು, ಯೆಹೋವನ ಬಾಯಿ ನೇಮಿಸಿದ *ಹೊಸ ಹೆಸರು* ನಿನಗೆ ದೊರೆಯುವದು" (ಯೆಶಾಯ 62:2; ಒತ್ತಿ ಹೇಳಿದ್ದು ನನ್ನದು). "ಜನಾಂಗಗಳು ಎಂದು ಅನ್ಯರಿಗೆ ಹೇಳಿಸಲಾಗಿದೆ"[38] ಜನಾಂಗಗಳು (ಅನ್ಯರು) ಮತ್ತು "ಅರಸರು" ಎಂಬುದು ಇನ್ನೊಂದು ವಾಗ್ದಾನವನ್ನು ನೆನಪು ಮಾಡುತ್ತದೆಯೇ? ಸೌಲನು ಸೇವಾಭಾರವನ್ನು ಹೊಂದಿದಾಗ ಯೇಸು ಹೇಳಿದ ಪದಗಳ ಕುರಿತಾಗಿ ಯೋಚಿಸೋಣವೇ? "ಕರ್ತನು ಅವನಿಗೆ - ನೀನು ಹೋಗು, ಆ ಮನುಷ್ಯನು ಅನ್ಯಜನರಿಗೂ *ಅರಸುಗಳಿಗೂ* ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ," (ಅಪೊಸ್ತಲರ ಕೃತ್ಯಗಳು 9:15; ಒತ್ತಿ ಹೇಳಿದ್ದು ನನ್ನದು) ಆಕಸ್ಮಿಕವಾಗಿ ಪೌಲನು ಅದೇ ಪಟ್ಟಣದಲ್ಲಿ ಅನ್ಯರಿಗೂ ಮತ್ತು ಅರಸುಗಳಿಗೂ ದೇವರ ವಾಗ್ದಾನವನ್ನು ನೇರವೇರಿಸಿದನು.[39] ಯೇಸುವಿನ ಅನುಯಾಯಿಗಳಿಗೆ ಒಂದು "ಹೊಸ ಹೆಸರು" ಕೊಡಲ್ಪಟ್ಟಿತು?[40]

"ಕ್ರೈಸ್ತರು" ಎಂಬುದಾಗಿ ನೀಡಲಾಗಿರುವ ಹೆಸರಿನ ಕುರಿತು ನಾನು ಹೆಚ್ಚಾಗಿ ಅರಿತಿರುವದಿಲ್ಲ. ಆದರೆ ಎರಡು ಸಂಗತಿಗಳು ಸ್ಪಷ್ಟವಾಗಿವೆ: (1) ಅದು ವಿಶೇಷವಾದ ಹೆಸರು ಬೇರೆ ಯಾವುದೇ ಹೆಸರುಗಳು ಕ್ರಿಸ್ತನನ್ನು ಇಷ್ಟಾಗಿ ಗೌರವಿಸದೇ, ಅದೇ ಸಮಯದಲ್ಲಿ ನಾವು ಆತನಿಗೆ ತೀರಿಸಬೇಕಾದ ಸಾಲದ ಕುರಿತು ಮಾತನಾಡುತ್ತದೆ. (2) ಇದನ್ನು ಒಂದು ವಿಶೇಷ ವಾದ ಸ್ಥಳದಲ್ಲಿ ನೀಡಲಾಯಿತು - ಯಾವ ಪಟ್ಟಣದಲ್ಲಿ ಯೆಹೂದ್ಯರು ಮತ್ತು ಅನ್ಯರು ಒಗ್ಗೂಡಿ "ಅವರು ಕ್ರೈಸ್ತರಿಗೆ ಸೇರಿದವರು"! ಎಂಬ ಸಾಮಾನ್ಯವಾದ ಐಕ್ಯತೆಯನ್ನು ಒಪ್ಪಿಕೊಂಡರೋ - ಆ ಪಟ್ಟಣದಲ್ಲಿ ಈ ಹೆಸರನ್ನು ಅವರಿಗೆ ನೀಡಲಾಯಿತು! ಅದನ್ನು ಗೌರವಪೂರ್ವಕವಾಗಿ ಧರಿಸಿಕೊಳ್ಳೋಣ ಕರ್ತನಿಗೆ ಸೇರಿದವರಾಗಿ ವರ್ತಿಸೋಣ!

## ಮೊದಲನೆಯ ಸಾರಿ "ಎಲ್ಲರಿಗಾಗಿ" ಚಿಂತನೆಯನ್ನು ಹೊಂದುವ ಅವಕಾಶವನ್ನು ಅನ್ಯರು ಹೊಂದಿದರು (11:27-30)

ಬಾರ್ನಬ, ಸೌಲ, ಹಾಗೂ ಇತರರು ಅಂತಿಯೋಕ್ಯದ ಹೊಸ ಕ್ರೈಸ್ತರೊಂದಿಗೆ ಕಾರ್ಯನಿರ್ವಹಿಸುವಾಗ, ದಕ್ಷಿಣ ಭಾಗದವರಾದ ಅನೇಕರು ಅವರನ್ನು ಸಂಧಿಸುತ್ತಿದ್ದರು. "ಆ ಕಾಲದಲ್ಲಿ ಪ್ರವಾದಿಗಳಾಗಿದ್ದ ಕೆಲವರು ಯೆರೂಸಲೇಮಿನಿಂದ ಅಂತಿಯೋಕ್ಯಕ್ಕೆ ಬಂದರು" (ವಚನ 27). ಪ್ರವಾದಿಗಳು ದೇವರಿಂದ ಪ್ರೇರಿತರಾಗಿ ದೇವರಿಗಾಗಿ ಮಾತನಾಡುವವರಾಗಿದ್ದರು.[41] ಪಂಚಾಶತ್ತಮದ ದಿವಸ ಅನೇಕರು ಪ್ರವಾದನೆಯ ವರವನ್ನು ಹೊಂದುವರೆಂದು

ತಿಳಿಸಿದ್ದನು (2:17), ಆದರೆ ಸಭೆಯಲ್ಲಿರುವ ಪ್ರವಾದಿಗಳ ಕುರಿತಾಗಿ ಇದೇ ಮೊದಲನೆಯ ಸಾರಿಗೆ ತಿಳಿಸಲಾಗಿದೆ. ಅವರು ಯೆರೂಸಲೇಮಿನಿಂದ ಬಂದವರೆಂಬುದು ಯೆರೂಸಲೇಮಿನವರು ಮತ್ತು ಅಂತಿಯೋಕ್ಯದವರ ಸಭೆಗಳ ನಡುವೆಯಿದ್ದ ಅನ್ಯೋನ್ಯತೆಗೆ ಸೂಚನೆ ನೀಡುತ್ತದೆ.

ಅವರಲ್ಲಿ "ಅಗಬ" ನೆಂಬುವನೊಬ್ಬನಿದ್ದನು (ವಚನ 28ಎ).[42] ಅಗಬನು ಪ್ರಖ್ಯಾತಿಗೊಂಡ ಪ್ರವಾದಿಯಾಗಿದ್ದನು, ಅವನನ್ನು ತಿರುಗಿ ಸಂಧಿಸೋಣ (21:10, 11). ಅವನು "ಲೋಕಕ್ಕೆಲ್ಲಾ ದೊಡ್ಡ ಕ್ಷಾಮ ಬರುವದೆಂದು ಪರಿಶುದ್ಧಾತ್ಮ ಪ್ರೇರಣೆಯಿಂದ ಸೂಚಿಸಿದ್ದನು" (11:28ಬಿ). "ಲೋಕ" ಎಂದರೆ ಆಕ್ರಮಿಸಿರುವ ಲೋಕ, ವಿಶೇಷವಾಗಿ ರೋಮ ಸಾಮ್ರಾಜ್ಯ ಲೂಕನು ಬರವಣಿಗೆಯ ವಿಶ್ಲೇಷಣೆಯನ್ನು ನೀಡಿ: "ಅದು ಕ್ಲೌದ್ಯ ಚಕ್ರವರ್ತಿಯ ಕಾಲದಲ್ಲುಂಟಾಯಿತು." ಎಂದು ಹೇಳಿರುವನು (ವಚನ 28ಸಿ). ಕ್ಲೌದ್ಯ ಚಕ್ರವರ್ತಿಯ ಕಾಲ ಎಂಬುದು ಸಾಮಾನ್ಯ ಚರಿತ್ರೆಯ ವಿಷಯವಾಗಿದ್ದು (ಕ್ರಿ.ಶ. 41-54), ರೋಮಾ ಸಾಮ್ರಾಜ್ಯದ ಅನೇಕ ಸ್ಥಳಗಳಲ್ಲಿ ಕ್ಷಾಮ ಉಂಟಾಯಿತು.[43]

ಅಗಬ ಹಾಗೂ ಅವನ ಸ್ನೇಹಿತರು ಅಂತಿಯೋಕ್ಯಕ್ಕೆ ಬಂದ ವಿಷಯವನ್ನು ನಾವು ತಿಳಿದಿರುವದಿಲ್ಲ ಬಹುಶಃ ಸಹಾಯಕ್ಕಾಗಿ ಅವರು ಬಂದಿರಬಹುದು. ಒಂದು ವೇಳೆ ಸಹಾಯವನ್ನು ಕೇಳುವ ಉದ್ದೇಶವನ್ನು ಹೊಂದಿರಲಿಕ್ಕಿಲ್ಲ, ಆದರೆ ಅನೇಕ ಸಭೆಗಳನ್ನು ಸಂಧಿಸಿ ಕ್ಷಾಮವನ್ನು ಎದುರಿಸಲು ಕ್ರೈಸ್ತರು ಸಿದ್ಧರಾಗಿರಬೇಕೆಂಬ ಮಾಹಿತಿಯನ್ನು ನೀಡಲು ನೇಮಕಗೊಂಡಿರಬಹುದು. ಅವರ ಉದ್ದೇಶವೇನೆಯಿರಲಿ ಅಂತಿಯೋಕ್ಯದ ಶಿಷ್ಯರ ಪ್ರತಿಕ್ರಿಯೇಯು ನಿಸ್ವಾರ್ಥವಾಗಿ ತಕ್ಷಣವೇ ಉಂಟಾಯಿತು: "ಆಗ ಆ ಶಿಷ್ಯರಲ್ಲಿ ಪ್ರತಿಯೊಬ್ಬರೂ ಯೂದಾಯ ಸೀಮೆಯಲ್ಲಿ ವಾಸವಾಗಿದ್ದ ಸಹೋದರರಿಗೆ ತಮ್ಮ ತಮ್ಮ ಶಕ್ತ್ಯಾನುಸಾರ ದ್ರವ್ಯ ಸಹಾಯ ಮಾಡಬೇಕೆಂದು ನಿಶ್ಚಯಿಸಿಕೊಂಡರು" (ವಚನ 29).[44]

ಅಗಬನ ಮಾತಿನ ಪ್ರಕಾರ, ಕ್ಷಾಮವು ಪಾಲಿಸ್ತೇನಿನಲ್ಲಿ ಹರಡಿದಂತೆ ಸಿರಿಯದಲ್ಲೂ ಹರಡುವ ಸಾಧ್ಯತೆಯಿತ್ತು, ಆದರೆ ಅಂತಿಯೋಕ್ಯದ ಕ್ರೈಸ್ತರು ತಮಗಾಗಿ ಚಿಂತಿಸದೇ ಯೆರೂಸಲೇಮಿನ ಸಹೋದರ ಮತ್ತು ಸಹೋದರರಿಯರ ಕುರಿತಾಗಿ ಚಿಂತಿಸಿದರು. ಅವರು ಕ್ರೈಸ್ತರಾಗಿದ್ದರಿಂದ ಯೆರೂಸಲೇಮಿನಲ್ಲಿ ಹಿಂಸೆಗೆ ಒಳಗಾಗಿದ್ದರು; ಕೆಲಸವನ್ನು ಕಳೆದು ಕೊಂಡಿದ್ದರು ಮತ್ತು ಯೆರೂಸಲೇಮಿನಲ್ಲಿ ಅನೇಕರು ಮನೆಗಳನ್ನು ಕಳೆದು ಕೊಂಡಿದ್ದರು; ಯೆರೂಸಲೇಮಿನ ಸಹೋದರಿಗಿಂತಲೂ ತಾವುಗಳು ಕ್ಷಾಮವನ್ನು ಎದರಿಸುವ ಉತ್ತಮವಾದ ಅವಕಾಶವನ್ನು ಹೊಂದಿದ್ದರೆಂದು ತಿಳಿದಿದ್ದರು. ಆದುದರಿಂದ, ಅವರು ತಕ್ಷಣವೇ ಆಹಾರವನ್ನು ಇತರೇ ಅಗತ್ಯತೆಗಳನ್ನು[45] ದಕ್ಷಿಣದವರಿಗೆ ಕಳುಹಿಸಿದರು.

ವಚನ 29ರಲ್ಲಿ ಎರಡು ವ್ಯಾಖ್ಯಾನಗಳು ನನ್ನ ಗಮನಕ್ಕೆ ಬರುತ್ತವೆ: (1) "ಪ್ರತಿಯೊಬ್ಬರೂ" ಅವರ ಸಹೋದರರ ಸಮಸ್ಯೆಯ ಕುರಿತು ಅಂತಿಯೋಕ್ಯ ಸಭೆಯ ಪ್ರತಿಯೊಬ್ಬರೂ ಚಿಂತಿಸುತ್ತಿದ್ದರು. (2) ಶಕ್ತ್ಯಾನುಸಾರವಾದ ... "ದ್ರವ್ಯ" ಹಳೇ ಒಡಂಬಡಿಕೆಯಲ್ಲಿ ದೇವರು ಕೆಲವು ಭಾಗ ಎಂದು ಅಪ್ಪಣೆ ನೀಡಿರುವನು.[46] ಹೊಸ ಒಡಂಬಡಿಕೆಯಲ್ಲಿ ಒಬ್ಬನು ದೇವರ ಸೇವೆಗೆ ದ್ರವ್ಯವನ್ನು ನೀಡುವದಾದರೆ ತನ್ನ "ಸಂಪಾದನೆಯ ಮೇರೆಗೆ" ನೀಡಬೇಕು (1 ಕೊರಿಂಥ 16:2). ಇನ್ನೇಂದಿಗೂ ಹಣದ ಕುರಿತಾಗಿ ವಿಭಾಗಿಸುವ ಊಹೆಯು ಇರುವದಿಲ್ಲ: ಹೆಚ್ಚು ಇರುವವರು ಹೆಚ್ಚು ನೀಡಲಿ, ಅಲ್ಪವಾಗಿ ಹೊಂದಿರುವವರು ಅಲ್ಪವಾಗಿ ನೀಡಲಿ.

ಯೆರೂಸಲೇಮಿನ ಕ್ರೈಸ್ತರು ಹಾಗೂ ಯೆಹೂದ್ಯ ಕ್ರೈಸ್ತರು ಮಾಡಿದ್ದ ಉಪಕಾರಕ್ಕಾಗಿ ಅಂತಿಯೋಕ್ಯದ ಶಿಷ್ಯರು ಪ್ರತ್ಯುಪಕಾರವನ್ನು ಮಾಡುವ ಅವಕಾಶವನ್ನು ಹೊಂದಿದ್ದಕ್ಕಾಗಿ ಸಂತೋಷಪಟ್ಟರು. ಯೆಹೂದ್ಯ ಕ್ರೈಸ್ತರು ಅವರಿಗೆ ಉತ್ತಮವಾದ ಮನುಷ್ಯನನ್ನು ಅವರ ಬಳಿಗೆ ಕಳುಹಿಸಿದ್ದರು (ಬಾರ್ನಬ); ಈಗ ಇವರು ಉತ್ತಮವಾದ ಕಾಣಿಕೆಯನ್ನು ನೀಡಲು ಸಿದ್ಧರಿದ್ದರು. ಪೌಲನು ಗಲಾತ್ಯದವರಿಗೆ ಬರೆಯುವಾಗ "ದೇವರ ವಾಕ್ಯದಲ್ಲಿ ಉಪದೇಶ ಹೊಂದುವವನು.

ಉಪದೇಶ ಮಾಡುವವನಿಗೆ ತನಗಿರುವ ಎಲ್ಲಾ ಒಳ್ಳೇಯವುಗಳಲ್ಲಿ ಪಾಲುಕೊಡಲಿ" (ಗಲಾತ್ಯ 6:6). ಈ ವಿಧವಾದ ಕಾರ್ಯವನ್ನೇ ಅಂತಿಯೋಕ್ಯದ ಕ್ರೈಸ್ತರು ಮಾಡಿದರು.

ಇತ್ತೀಚಿನ ದಿವಸಗಳಲ್ಲಿ, ಕೆಲವರು ದೇವರು ಸಭೆಗಳಲ್ಲಿ ತಿಳಿಸಲಾರದಂತಹ ನಿಯಮಾವಳಿಗಳನ್ನು ಮಾಡಿರುವರು.[47] ಹಾಗೆ ಸಭೆಯು ಕೂಡ ಅವುಗಳಿಗೆ ಸಹಕರಿಸುತ್ತಿದೆ ಅವರುಗಳಿಗೆ ಇರುವ ಹಲವಾರು ಭಯಗಳನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಸಭೆಗಳನ್ನು ಉತ್ತೇಜಿಸಲು ಮನುಷ್ಯರು ಮಾಡಿರುವ ನಿಯಮಾವಳಿಗಳನ್ನು ನಾನು ತಿರಸ್ಕರಿಸುತ್ತೇನೆ, ಅವುಗಳು ಅವರ ಸಭೆಗಳನ್ನು ಪ್ರತ್ಯೇಕ್ಷಿಸಿ. ಅವರಲ್ಲಿ ಪರಸ್ಪರ ಒಪ್ಪಿಕೊಳ್ಳುವಂತೆ ಮಾಡುತ್ತದೆ. ಸಭೆಗೆ ಪ್ರೀತಿಯನ್ನು ಅತಿ *ಹೆಚ್ಚಾಗಿ* ತೋರಿಸುವ ಸಭೆಗಳ ಅಗತ್ಯತೆ ಇದೆ.

ಅಂತಿಯೋಕ್ಯದ ಕ್ರೈಸ್ತರು "ಕೇವಲ ದ್ರವ್ಯಗಳನ್ನು ಕಳುಹಿಸಲು ನಿರ್ಧರಿಸದೆ"; ಆ ನಿರ್ಣಯವನ್ನು ಈಡೇರಿಸಿದರು, "ಹಾಗೆಯೇ ಮಾಡಿ ಅದನ್ನು ಬಾರ್ನಬ ಸೌಲರ ಕೈಯಿಂದ ಸಭೆಯ ಹಿರಿಯರಿಗೆ ಕಳುಹಿಸಿದರು" (ವಚನ 30).[48] ಒಳ್ಳೆಯ ಮನೋಭಾವವು ಹಸಿದ ಹೊಟ್ಟೆಯನ್ನು ತುಂಬಿಸಲಾರದು ಅಥವಾ ನಡುಗುತ್ತಿರುವ ದೇಹಕ್ಕೆ ಬಟ್ಟೆಯನ್ನು ನೀಡಲಾರದು. ಅವರು ತಮ್ಮ ದ್ರವ್ಯವನ್ನು ರವಾನಿಸುವ ಹೊಣೆಯನ್ನು ಬಾರ್ನಬ ಮತ್ತು ಸೌಲರಿಗೆ ನೀಡಿದರು. ಯೆರೂಸಲೇಮಿನ ಸಭೆಯವರು ಬಾರ್ನಬನನ್ನು ಕಳುಹಿಸಿದ್ದರು, ಬಾರ್ನಬನು ಸೌಲನನ್ನು ಅಮದು ಮಾಡಿಕೊಂಡಿದ್ದರು; ಆದರೆ ಆ ಇಬ್ಬರು ಮನುಷ್ಯರು ಅಂತಿಯೋಕ್ಯ ಸಭೆಯ ಸಹೋದರರ ವಿಶ್ವಾಸವನ್ನು ಪಡಕೊಳ್ಳುವಲ್ಲಿ ಯಶಸ್ವಿಯಾಗಿದ್ದರು.

ಆ ದ್ರವ್ಯಗಳನ್ನು ಅಪೊಸ್ತಲರ ಬಳಿಗೆ ತೆಗೆದುಕೊಂಡು ಹೋಗಲಿಲ್ಲ, ಅದನ್ನು "ಹಿರಿಯರ ಬಳಿಗೆ ತೆಗೆದು ಕೊಂಡು ಹೋದರು" ಸಭಾ ನಾಯಕರನ್ನು "ಹಿರಿಯರು"[49] ಎಂಬುದಾಗಿ ಮೊದಲ ಬಾರಿ ಸಂಭೋಧಿಸಿದ್ದನ್ನು ಇಲ್ಲಿ ಗಮನಿಸುತ್ತೇವೆ. ಯುದಾಯ ಸಭೆ ಮತ್ತು ಯೆರೂಸಲೇಮಿನ ಸಭೆಯ ಹಿರಿಯರ ಕುರಿತು "ಹಿರಿಯರು" ಎಂದು ಕರೆದಿರಬಹುದು. ಅವರ ಧರ್ಮಕಾರ್ಯದ ಅಂತ್ಯದಲ್ಲಿ, "ಬಾರ್ನಬ ಮತ್ತು ಸೌಲರು *ಯೆರೂಸಲೇಮಿಗೆ* ಹಿಂತಿರುಗಿದರು" (12:25; ಒತ್ತಿ ಹೇಳಿದ್ದು ನನ್ನದು), ಅವರು ದ್ರವ್ಯವನ್ನು ಯೆರೂಸಲೇಮಿಗೆ ತೆಗೆದುಕೊಂಡ ಸಾಧ್ಯತೆಯಿರಬಹುದು, ಮತ್ತು ಅದನ್ನು ಸಭಾಹಿರಿಯರುಗಳು ಹಂಚಿದರು.[50] ಸಭಾ ನಾಯಕತ್ವವು ಅಪೊಸ್ತಲರಿಂದ, ಹಿರಿಯರಿಗೆ ವರ್ಗಾವಣೆಗೊಂಡಿತು. ಅಪೊಸ್ತಲರು ತಾತ್ಕಲಿಕವಾದ ಸ್ಥಾನವನ್ನು ಸಭೆಯಲ್ಲಿ ಹೊಂದಿದ್ದರು; ಹಿರಿಯರು ನಿರಂತರವಾದ ಸ್ಥಾನವನ್ನು ಹೊಂದಿದ್ದರು.

ಕರ್ತನ ಸಭೆಯನ್ನು ಉತ್ತಮವಾದ ಸದ್ಗುಣಕ್ಕೆ ಸಾಗಿಸುವ ಅದ್ಭುತವಾದ ಅನ್ಯೋನ್ಯ ಪ್ರೀತಿ ಯನ್ನು ನಮ್ಮ ವಾಕ್ಯವು ತಿಳಿಸುತ್ತದೆ. ಬಾರ್ನಬನನ್ನು ಕಳುಹಿಸುವ ಮುಖಾಂತರ ಯೆರೂಸಲೇ ಮಿನವರು ಅಂತಿಯೋಕ್ಯ ಸಭೆಗೆ ತಮ್ಮ ಸಹಾಯವನ್ನು ತೋರಿದ್ದರು. ಎರಡೂ ಸಭೆಗಳವರು ಸ್ವಾಯತ್ತವನ್ನು ಹೊಂದಿದ್ದರು; ಒಬ್ಬರು ಇನ್ನೊಬ್ಬರಿಗೆ ಸಹಾಯಿಸಬೇಕೆಂಬ ಹೆಮ್ಮೆಯನ್ನು ಹೊಂದದೆ; *ಪ್ರೀತಿಯಿಂದ* ಮಾಡಿದರು.

ಕೈಯನ್ನು ಕಳೆದುಕೊಂಡಿದ್ದ ಒಬ್ಬ ಬಾಲಕನು ಸತ್ಯವೇದ ಶಾಲೆಗೆ ಹೋಗಿದ್ದನು. ಶಾಲೆಯು ಅಂತ್ಯಗೊಳ್ಳುವವರೆಗೆ, ಶಾಲಾ ಶಿಕ್ಷಕಿ ಸರಿಯಾಗಿಯೇ ವರ್ತಿಸಿದ್ದಳು. ಬೆರಳುಗಳ ಆಟದಿಂದ ಕೈಗಳನ್ನು ಜೋಡಿಸಿ, "ನಾವುಗಳ ಸಭೆಯನ್ನು ಮಾಡೋಣ" ಅಂದಳು.[51] ಆ ಹುಡುಗನು ಆ ಆಟದಲ್ಲಿ ಭಾಗಿಯಾಗಲಾರನು ಎಂದು ತಕ್ಷಣವೇ ಆ ಶಿಕ್ಷಕಿ ಅರಿತಳು. ಆಕೆ ಏನು ಮಾಡ ಬೇಕೆಂದು ಯೋಚಿಸುತ್ತಿರುವಾಗ, ಆ ತರಗತಿಯಲ್ಲಿದ್ದ ಮತ್ತೊಬ್ಬ ಬಾಲಕಿ ತನ್ನ ಕೈಯನ್ನು ಅ ಬಾಲಕನ ಒಂದು ಕೈಯ ಬಳಿ ಸೇರಿಸಿ, "ನಾವು ಒಗ್ಗೂಡಿ ಸಭೆಯನ್ನು ಕಟ್ಟೋಣ ಎಂದಳು." ಪ್ರತಿಯೊಬ್ಬರಲ್ಲಿ ಖಾಸಗಿ ತನ ಇದ್ದರೂ, ಸ್ವಯತ್ತ ಹೊಂದಿರುವ ಸಭೆಯಾಗಿರುವೆವು, ನಾವೆಲ್ಲರೂ ನಮ್ಮ ಕೈಗಳನ್ನು ಒಟ್ಟಾಗಿ ಜೊತೆಗೂಡಿಸಿ "ಸಭೆಯನ್ನು ಒಟ್ಟಾಗಿ ಮಾಡಬೇಕು"!

## ಮುಕ್ತಾಯ

2:42-47ವರೆಗಿನ, ಪಾಠವನ್ನು "ನಾನು ಸದಸ್ಯನಾಗಿರಲು ಬಯಸುವ ಸಭೆ" ಎಂಬ ತಲೆ ಬರಹವನ್ನು *ಅಪೊಸ್ತಲರ ಕೃತ್ಯಗಳು 1ನೇ* ಪುಸ್ತಕದಲ್ಲಿ ಸೇರಿಸಲಾಗಿದೆ. 11:19-30ರಲ್ಲಿ ನಮೂದಿಸಿರುವ ಇನ್ನೊಂದು ಸಭೆಯಾದ ಅಂತಿಯೋಕ್ಯ ಸಭೆಯಲ್ಲಿಯೂ, ನಾನು ಸದಸ್ಯನಾಗಿರಲು ಬಯಸುವೆನು. (1) ಅದು ಒಂದು ಚಿಂತನೆಯನ್ನು ಹೊಂದಿದ್ದ ಸಭೆಯಾಗಿತ್ತು - ಆ ಚಿಂತನೆಯು ಮನುಷ್ಯನ ಜಾತಿ ಮತ್ತು ಹಿನ್ನೆಲೆಯನ್ನು ಹೊರತು ಪಡಿಸಿತ್ತು. (2) ಅದು ಸುವಾರ್ತೆಗೆ ಅನುಗುಣವಾದ ಸಭೆಯಾಗಿತ್ತು - ಎಲ್ಲರಿಗೂ ಶುಭ ಸಂದೇಶವನ್ನು ನೀಡುತ್ತಿದ್ದರು. (3) ಅದು ನಿಸ್ವಾರ್ಥದ ಸಭೆಯಾಗಿತ್ತು - ಯಾರು ಗೌರವಿಸಲ್ಪಡಬೇಕು ಎಂದು ಚಿಂತಿಸಲಿಲ್ಲ. (4) ಕ್ರಿಸ್ತನನ್ನು ಸನ್ಮಾನಿಸುವ ಸಭೆಯಾಗಿತ್ತು - ಕ್ರಿಸ್ತನ ನಾಮವನ್ನು ಧರಿಸಿದ್ದರು. (5) ಪರಸ್ಪರ ಮೆಚ್ಚಿಕೊಳ್ಳುವ ಸಭೆಯಾಗಿತ್ತು - ಅವರು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದರಿಂದ. (6) ವೃದ್ಧಿಗೊಂಡ ಸಭೆಯಾಗಿತ್ತು - ದೇವರು ಅವರ ಪ್ರಯತ್ನಗಳನ್ನು ಆಶೀರ್ವದಿಸಿದನು. ಇಷ್ಟು ವೃದ್ಧಿಗೊಂಡ ವಿಷಯಗಳು ಇನ್ಯಾವುದೇ ವ್ಯಾಖ್ಯಾನವನು ಕಾಣುವದಿಲ್ಲ! ಕೇಲವೇ ವಚನಗಳಲ್ಲಿ ಅವುಗಳನ್ನು ಸೇರಿಸಲಾಗಿದೆ, "ಕರ್ತನ ಹಸ್ತವು ಅವರಿಗೆ ಸಹಾಯವಾದ್ದರಿಂದ ಬಹು ಜನರು ನಂಬಿ ಕರ್ತನ ಕಡೆಗೆ ತಿರುಗಿಕೊಂಡರು" (ವಚನಗಳು 21, 24ಬಿ, 26). ಇಂಥಹ ಸದ್ಗುಣಗಳನ್ನು ಹೊಂದಿದ ಸಭೆಗಳನ್ನು ನಾವು ಹೊಂದಬೇಕಾದರೆ, ನಾವು ಸಹ ಆ ಸದ್ಗುಣಗಳನ್ನು ಹೊಂದಿರುವ *ಸದಸ್ಯರಾಗಿರಬೇಕು.*

ಅಂತಿಮವಾಗಿ, ನಾವು ಅಧ್ಯಯನ ಮಾಡಿದ ಪಾಠಗಳಲ್ಲಿರುವ ಸತ್ಯದ ಬೆಳಕಿನಿಂದ ನಮ್ಮನ್ನು ನಾವು ಪರಿಶೀಲಿಸಿಕೊಳ್ಳೋಣ. "ಮೊದಲ ವಿಷಯಗಳು" ಎಂದು ಆರಂಭಮಾಡಿದ್ದೆವು. ಆತ್ಮೀಕ ವಿಷಯಗಳು ಕೆಲವರಿಗೆ ಮೊದಲ ಸಂಗತಿಯಾಗಿರ ಬಹುದು ಅದನ್ನು ಅನುಸರಿಸುವದರಿಂದ ಜೀವಿತಕ್ಕೆ ಆಶೀರ್ವಾದ ಉಂಟಾಗುತ್ತದೆ. ಕೆಲವರು ಇನ್ನೂ "ದೇವರ ಕಡೆಗೆ ತಿರುಗದ" ಕಾರಣ, ಕ್ರಿಸ್ತನ ನ್ಯಾಯಬದ್ಧವಾದ ಹೆಸರನ್ನು ಪಡೆದುಕೊಳ್ಳುವದಕ್ಕೆ ಸಾಧ್ಯತೆ ಇಲ್ಲದೆ ಇರಬಹುದು, ಆದರೆ ಅಂತಿಯೋಕ್ಯದವರ ಹಾಗೆ, ಮಾನಸಾಂತರ ಪಟ್ಟು ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು. ಈ ಮನೋಭಾವವು ಇರುವುದಾದರೆ, ಕರ್ತನಿಗೆ ವಿಧೇಯರಾಗಲು ಹಿಂಜರಿಯುವದು ಅನಗತ್ಯ. ನೀವು ಆತನಿಗೆ *ಸೇರಿದ,* ನೂತನ ಜೀವಿತವನ್ನು ಹೊಂದಿದ *ಪ್ರಥಮ* ದಿನವು ಇದಾಗಿರುತ್ತದೆ!

## ದೃಷ್ಯ ಸಂಬಂಧವಾದ – ಟಿಪ್ಪಣಿ

"ಕ್ರೈಸ್ತರು" ಎಂಬ ಹೆಸರನ್ನು ಪ್ರಮುಖವಾಗಿ ತೋರಿಸಲು ಹಲಗೆಯ ಮೇಲೆ "ಕ್ರೈಸ್ತನು" ಎಂದು ಬರೆಯಿರಿ. ಅದರಲ್ಲಿ ಮೂರನೇ ಒಂದು ಅಂಶ "ಕ್ರಿಸ್ತ" ಎಂಬುದಾಗಿರುತ್ತದೆ. ನಂತರ "ಅನು" ಅದು ಅಂತ್ಯದಲ್ಲಿನ - "ಸೊತ್ತು" ಎಂಬುದಾಗಿರುತ್ತದೆ. "ಕ್ರೈಸ್ತನು" ಎಂಬ ಬರವಣಿಗೆಯ ತಳಭಾಗದಲ್ಲಿ, "ಕ್ರಿಸ್ತನವನು" ಮತ್ತು "ಕ್ರಿಸ್ತನಿಗೆ ಸೇರಿದವನು" ಎಂದು ವಿವರಣೆಗಾಗಿ ಬರೆಯಿರಿ.

(ಕ್ರೈಸ್ತ) (ಅನು)
(ಕ್ರಿಸ್ತನವನು)
(ಕ್ರಿಸ್ತನಿಗೆ ಸೇರಿದವನು)

ಅದನ್ನು ದಪ್ಪ ಕಾಗದದ ಮೇಲೂ ಬರೆಯಬಹುದು.

## ಪ್ರಸಂಗದ ಟಿಪ್ಪಣಿ

ಅಂತಿಯೋಕ್ಯದವರಿಗೆ ಬಾರ್ನಬನು ಬೋಧಿಸಿದ ಪ್ರಸಂಗವನ್ನು ಒಂದು ವಿಶೇಷ ವಿಷಯವನ್ನಾಗಿ ಮಾಡಬಹುದು. "ಅವನು ಸಂತೋಷಪಟ್ಟು ದೃಢ ಮನಸ್ಸಿನಿಂದ ಕರ್ತನಲ್ಲಿ ನೆಲೆಗೊಂಡಿರ್ರಿ ಎಂದು ಅವರೆಲ್ಲರಿಗೂ ಬುದ್ಧಿ ಹೇಳಿದನು" (ವಚನ 23). ಕ್ರೈಸ್ತ ಜೀವಿತವನ್ನು ಆರಂಭಿಸಿದ ಅನೇಕರು ಬಿದ್ದು ಹೋಗುವರು! "ಕರ್ತನಲ್ಲಿ ದೃಢವಾಗಿ ನಿಲ್ಲಿರಿ" ಎಂದು ಉತ್ತೇಜನ ನೀಡುವಂತ, ಬಾರ್ನಬನ ಅಗತ್ಯತೆಯು ನನಗೆ ಉಂಟು. ಈ ಪಾಠವನ್ನು ನಾವು "ಕರ್ತನಲ್ಲಿ ದೃಢವಾಗಿ ನಿಲ್ಲಿರಿ" ಎಂಬುದಕ್ಕೆ ಮುಖ್ಯಾಂಶಗಳನ್ನಾಗಿ (1) ನಿಮ್ಮ ಆಶೀರ್ವಾದವನ್ನು ನೆನಪಿಸಿಕೊಳ್ಳಿರಿ (ಅವನು ಸಂತೋಷಿಸಿದನು) (2) ನಿಮ್ಮ ಸಹೋದರರನ್ನು ನೆನಪಿಸಿರಿ ("ಅವನು ಅವರನ್ನು ಉತ್ತೇಜಿಸಿದನು"), (3) ನಿಮ್ಮ ಸಮರ್ಪಣೆಯನ್ನು ನೆನಪು ಮಾಡಿಕೊಳ್ಳಿರಿ (ಕರ್ತನಲ್ಲಿ ಸತ್ಯವಾಗಿ ನಿಲ್ಲಿರಿ).

---

ಟಿಪಪಣಿಗಳು

[1]6:5ರಲ್ಲಿ ಅಂತಿಯೋಕ್ಯದ ಕುರಿತು ಮೊದಲ ಸಾರಿ ನೋಡುತ್ತೇವೆ. [2]ಅಂತಿಯೋಕ್ಯದ ಬಂದರಿಗೆ ಸೆಲೂಕ್ಯ ಎಂಬ ತನ್ನ ಸ್ವಂತ ಹೆಸರನ್ನು ನೀಡಿದನು (13:4). [3]ಇತರೆ 16 ಪಟ್ಟಣಗಳನ್ನು ಪರಿಗಣಿಸಲಾಯಿತು. 13:14ರಲ್ಲಿ ಇನ್ನೊಂದು ಅಂತಿಯೋಕ್ಯವಿದೆ. [4]ರೋಮಾ ಮತ್ತು ಅಲೆಕ್ಸಾಂದ್ರಿಯಾ ದೊಡ್ಡದಾಗಿದ್ದವು. ಅಂತಿಯೋಕ್ಯದಲ್ಲಿ ಅರ್ಧ ಮಿಲಿಯನ್ ಜನರಿದ್ದರು. [5]ಹಳೇ ಹೇಳಿಕೆಯ ಪ್ರಕಾರ, ದಾಫ್ನೆ ತಪ್ಪಿಸಿಕೊಂಡು ಲಾರೆಲ್ ಬುಶ್‌ಗೆ ಹೋದನು. [6]"ಪೌಲನ ಮೊದಲ ಸೇವಾ ಪಯಣದ" ನಕ್ಷೆಯನ್ನು ನೋಡಿರಿ. [7]ಫೊಯಿನಿಕೆಯಲ್ಲಿಯೂ ಕ್ರೈಸ್ತರಿದ್ದರೆಂದು ಓದುತ್ತೇವೆ. ತೈರ್ ಮತ್ತು ಸೀದೋನಿನಲ್ಲಿಯೂ ಇದ್ದರು (15:3; 21:3-7; 27:3). [8]ಕುಪ್ರ ದ್ವೀಪವು "ಮೂಲ ಸ್ಥಳವಾಗಿರಲಿಲ್ಲ" ಬಾರ್ನಬ ಮತ್ತು ಪೌಲರು "ಅವರು ಪ್ರಥಮ ಸೇವಾ ಪಯಣದಲ್ಲಿ" ಆ ಸ್ಥಳವನ್ನು ಸಂಧಿಸಿದ್ದರು. [9]ವಚನ 19ರಲ್ಲಿ 19-30ರ ಹಿಂದಿನ ಭಾವವು ಅಡಕಗೊಂಡಿದೆ. "ನಂತರ" ಎಂಬುದು "ಆದ್ದರಿಂದ" ಎಂದು ಅನುವಾದಿಸಲ್ಪಟ್ಟಿದೆ ಎಂಬುದಾಗಿ, ಸಭೆಗಳವರು, ಅನ್ಯರು ಸಹ ಸುವಾರ್ತೆಯನ್ನು ಅಂಗೀಕರಿಸಿದರು ಎಂಬುದನ್ನು ನಂಬುವಂತೆ ಪೇತ್ರನು ಮನವರಿಕೆ ಮಾಡಿದನು. ಇನ್ನೂ ಕೆಲವರು ಪ್ರಾಯೋಗಿಕವಾಗಿ ಪ್ರಸಂಗ ಮಾಡಿದ ಕುರಿತು ಲೂಕನು ತಿಳಿಸಿರುವನು. [10]ಕುರೇನ್ಯವು ಉತ್ತರ ಆಫ್ರಿಕದ ಪಟ್ಟಣವಾಗಿದೆ. ಪಂಚಾಶತ್ತಮ ದಿನದಂದು ಕುರೇನ್ಯದ ಯೆಹೂದ್ಯರು ಸಹ ಇದ್ದರು (2:10); ಅಲ್ಲಿ ಕೆಲವರು ಪರಿವರ್ತನೆಗೊಂಡಿದ್ದರು. ಕುರೇನ್ಯದ ಸೀಮೋನನು ಅಂತಿಯೋಕ್ಯದಲ್ಲಿ ಸುವಾರ್ತೆಯನ್ನು ಸಾರಿರಬಹುದು (ಮತ್ತಾಯ 27:32).

[11]8:4ರ ಗ್ರೀಕ್‌ನ "ಸಾರೋಣ" ಎಂಬುದು, "ಸಾರೋಣ" ಎಂಬುದಾಗಿರದೆ, "ಸುವಾರ್ತೆ" ಎಂಬುದಾಗಿದೆ. NCVಯಲ್ಲಿ ಅವರಿಗೆ ಯೇಸುವಿನ ಕುರಿತ ಸಂದೇಶ ಎಂಬುದಾಗಿದೆ. [12]"ಕ್ರಿಸ್ತ ಯೇಸು" ಎಂಬುದರ ಬದಲು "ಯೇಸುವಿನ" ಸಂದೇಶವನ್ನು ಅನ್ಯರಿಗೆ ಸಾರಿದರು ಎಂಬುದು ಕೆಲವರ ಅಭಿಪ್ರಾಯ. "ಕರ್ತನು" ಎಂಬುದು ಹೆಚ್ಚು ಅರ್ಥಗರ್ಭಿತವಾಗಿದೆ. [13]ಗ್ರೀಕ್ ಎಂದರೆ ಗ್ರೀಕ್ ಭಾಷೆಯ ಯೆಹೂದ್ಯರು 6:1ರಲ್ಲಿ ಈ ವ್ಯಾಖ್ಯಾನವಿದೆ. ಈ ಹಿನ್ನೆಲೆಯಲ್ಲಿ ಗ್ರೀಕ್ ಭಾಷೆಯ ಅನ್ಯರು ಎಂಬುದನ್ನು ಅರಿಯಬೇಕು. [14]13:1ರಲ್ಲಿ ಈ ಹೆಸರಿರ ಬಹುದು. [15]ಅಂತಿಯೋಕ್ಯಕ್ಕೆ ಪ್ರಯಾಣಿಸಿದವರು ಮಹತ್ಕಾರ್ಯಗಳನ್ನುಮಾಡಿರಬಹುದು, ಅಪೊಸ್ತಲರು ಅವರ ಮೇಲೆ ಈ ಹಿಂದೆ ಹಸ್ತವನ್ನಿಟ್ಟಿರಬಹುದು. [16]ಇಂಗ್ಲೀಷ್ ಹಾಗೂ ಗ್ರೀಕ್ ಭಾಷೆಯಲ್ಲಿನ ಎರಡರಲ್ಲಿಯೂ ನಂಬುವದು ಮತ್ತು ತಿರುಗಿಕೊಳ್ಳುವದು ಎಂಬುದು ಪ್ರತ್ಯೇಕವಾದ ಕ್ರಿಯೆಗಳಾಗಿವೆ ಮತ್ತು ಮಾನಸಾಂತರ ಹಾಗೂ ತಿರುಗಿಕೊಳ್ಳುವದು ಪ್ರತ್ಯೇಕವಾಗಿವೆ 3:19. [17]ಹೇಗೆ "ಮೂರು ಸಾವಿರ ಜನರು ತಿರುಗಿಕೊಂಡರು" ಎಂಬ ವಿಷಯದ 2:41, 47ರ ಪಾಠವಿರುವ *ಅಪೊಸ್ತಲರ ಕೃತ್ಯಗಳು, 1* ನೋಡಿರಿ. [18]ಯೆಹೂದ್ಯರಿಗೆ ಪ್ರಸಂಗ ಮಾಡುವ ಮೂಲಕ ಅನೇಕರು ತಿರುಗಿಕೊಂಡರು ಎಂಬುದಾಗಿರುವದಿಲ್ಲ (11:19) ಅನೇಕ ಅನ್ಯರು ಎಂಬುದಾಗಿದೆ (11:20, 21). ಅಂತಿಯೋಕ್ಯ ಸಭೆಯವರು ಅನ್ಯರಾಗಿದ್ದರು ಎಂಬುದು ನಾನು ನಂಬುದಕ್ಕೆ ಯೋಗ್ಯವಾಗಿದೆ. [19]ಸುವಾರ್ತೆ ಸಾರಿದ ಯೆಹೂದ್ಯ ಶಿಷ್ಯರು ಇದದರು, ಯೆಹೂದ್ಯ ಶಿಷ್ಯರು ಸಭೆಯ ಸದಸ್ಯರಾಗಿರಲಿಲ್ಲ. [20]ಬಾರ್ನಬನು ಹನ್ನೆರಡು ಜನರಲ್ಲಿ ಒಬ್ಬನಾಗಿ ಇರದೆ ಇದದ್ದರಿಂದ, ಅವನ ಕಾರ್ಯದಲ್ಲಿ ವ್ಯತ್ಯಾಸವಿತ್ತು.

ಸಮಾರ್ಯದ ಹೊಸ ಕ್ರೈಸ್ತರ ಮೇಲೆ ಪೇತ್ರ ಯೋಹಾನರು ತಮ್ಮ ಹಸ್ತವನ್ನಿಟ್ಟರು, ಮತ್ತು ಮಹತ್ಕಾರ್ಯದ ವರವನ್ನು ನೀಡಿದರು. ಬಾರ್ನಬನು ಅದನ್ನು ಮಾಡಲು ಸಾಧ್ಯವಿರಲಿಲ್ಲ; ಆದರೆ ಜನರಿಗೆ ಸುವಾರ್ತೆ ಸಾರಿದನು.

[21]ಭಿಕ್ಷುಕನನ್ನು ಗುಣಪಡಿಸುವ ಮೂಲಕ, ಅವರು ಜನರನ್ನು ಸೇರಿಸಿದರು. [22]ಅಪೊಸ್ತಲರು ಕಳುಹಿಸಲ್ಪಟ್ಟವರಲ್ಲ ಎಂಬುದು ಕೆಲವರ ಅಭಿಪ್ರಾಯ. "ಏಕೆಂದರೆ ಅವರೆಲ್ಲರೂ ಪ್ರಸಂಗದ ಪ್ರಯಾಣದಲ್ಲಿದ್ದರು." ಬಹುಶಃ ಅದು ಸತ್ಯವಿರಬಹುದು, ಅಪೊಸ್ತಲರಿಗಿಂತಲೂ, ಬಾರ್ನಬನು ಅಂತಿಯೋಕ್ಯದವರನ್ನು ತಿಳಿದಿದ್ದರಿಂದ, ಅವನನ್ನು ಅಲ್ಲಿಗೆ ಕಳುಹಿಸಲಾಯಿತು. (ಬಾರ್ನಬನು ಸ್ವ ಇಷ್ಟದಿಂದ ಹೋಗಿರಬಹುದು.) [23]"ಹೆಲೆನೆಸ್ಟಿಕ್ ಜೂ" ಎಂಬ ಟಿಪ್ಪಣಿ ನೋಡಿರಿ. ಈ ಪಾಠದಲ್ಲಿ *ಅಪೊಸ್ತಲರ ಕೃತ್ಯಗಳು, 2* ಪುಸ್ತಕದಲ್ಲಿ "ಸಂಗತಿಗಳು ಬಿರುಕುಗಳಿಂದ ಬೀಳುವಾಗ" ಎಬುದಾಗಿದೆ. [24]ಅವರ ನಿರ್ಧಾರದಲ್ಲಿ ಆತ್ಮನು ಪಾಲು ಹೊಂದಿದ್ದನು ಇದರಲ್ಲಿ ಸಂದೇಹವಿಲ್ಲ. [25]ಮೂಲ ವಾಕ್ಯವನ್ನು NASB ಸರಿಯಾಗಿ ತರ್ಜುಮೆ ಮಾಡಿದೆ. NIVಯಲ್ಲಿ "ದೇವ ಕೃಪೆಯ ಸಾಕ್ಷಿಯನ್ನು ನೋಡಿದನು" ಎಂಬುದಾಗಿದೆ. (ಒತ್ತಿ ಹೇಳಿದ್ದು ನನ್ನದು.) [26]"ಪೂರ್ಣ ಹೃದಯದಿಂದ" ಎಂದು NIV ಹೇಳುತ್ತದೆ. [27]ಬಾರ್ನಬನು ಪರಿಣಾಮಕಾರಿಯಾದ ಪ್ರಂಗಿಯಾಗಿದ್ದನು, ಅದರ ಕುರಿತು ಇದ್ದ ಚಿಕ್ಕ ಸಾರಾಂಶ. [28]"ಪರಿಶುದ್ಧಾತ್ಮ ಭರಿತ" ಎಂಬುದು "ಆತ್ಮನಿಂದ ಹತೋಟಿ" ಎಂಬ ಅರ್ಥ ಅದನ್ನು ಮಹಾತ್ಕಾರ್ಯ ಮಾಡದ ಹಾಗೂ ಮಾಡದೆ ಇರುವ ಕಾರ್ಯವನ್ನು ಮಾಡುತ್ತದೆ. ಬಾರ್ನಬನು ಪ್ರೇರಿತ ನಾದ ಪ್ರಸಂಗಿಯಾಗಿದ್ದನು/ಬೋಧಕನಾಗಿದ್ದನು (13:1). ಮಹತ್ಕಾರ್ಯದ ವ್ಯಾಖ್ಯಾನ ವಿರಬಹುದು. ಅವನಲ್ಲಿ ದೇವರ ಆತ್ಮವಿತ್ತು ಎಂಬುದನ್ನು ಬಾರ್ನಬನು ತನ್ನಜೀವಿತದ ಮೂಲಕ ತೋರಿಸಿದನು (ಗಲಾತ್ಯ 5:22, 23). [29]ಬಾರ್ನಬನು ಆತ್ಮೀಯ ವರಗಳನ್ನು ಹೊಂದಿದ್ದರಿಂದ, (13:1) ಆತ್ಮನ ಮಾರ್ಗದರ್ಶನದಂತೆ ಪೌಲನನ್ನು ಹುಡುಕಿದನು - 13:2 ಆಸಕ್ತಿಯಿಂದ. [30]ಇದನ್ನು ಬರೆಯುವ ಸಮಯದಲ್ಲಿ "ಕ್ರೈಸ್ತರು" ಎಂಬ ಹೆಸರು ಪ್ರಖ್ಯಾತಿಯಲ್ಲಿತ್ತು ಎಂದು ಲೂಕನು ತಿಳಿಸಿರುವನು, ಅದರ ಮೂಲದ ವಿವರಣೆಯು ಬೆಲೆಯುಳ್ಳದ್ದಾಗಿತ್ತು.

[31]ಇಂಗ್ಲೀಷ್ ಪದಕ್ಕೆ ಸಮಾನಾದ, ಗ್ರೀಕ್ ಅಕ್ಷರಗಳನ್ನು ಬಳಸಿ, ಇಂಗ್ಲೀಷ್ ಪದವನ್ನು ಮಾಡಲಾಗಿದೆ. [32]Adolph Deissmann, *Light From the Ancient East* (Grand Rapids, Mich.: Baker Book House, 1965), 377. [33]J. W. Roberts, *Acts of Apostles*, Part 1 (Austin, Tex.: R. B. Sweet Co., 1967), 82; Lewis Foster, comments on Acts, *The NIV Study Bible* (Grand Rapids, Mich.: Zondervan Publishing House, 1985), 1667. [34]J. W. McGarvey, *New Commentary on Acts of Apostles,* vol. 1 (Delight, Ark.: Gospel Light Publishing Co., n.d.), 228. [35](ಕ್ರಮ ಟಿಸೋ) ಎಂಬ ಗ್ರೀಕ್ ಪದವನ್ನು ತರ್ಜುಮೆಮಾಡಿ "ದೈವೀಕ ಮಾರ್ಗ ದರ್ಶನ" ಎಂದು ಅಪೊಸ್ತಲರ ಕೃತ್ಯಗಳು 10:22 ತಿಳಿಸಿ ಮತ್ತು "ದೇವರಿಂದ ಎಚ್ಚರಿಸಲ್ಪಟ್ಟು" ಎಂದು ಮತ್ತಾಯ 2:12, 22; ಇಬ್ರಿಯ 8:5, 11:7ರಲ್ಲಿ ತಿಳಿಸಲಾಗಿದೆ. "ದೈವೀಕ ಮಾರ್ಗದರ್ಶನದ" ಸೂಚನೆ ಲೂಕ 2:26 ಮತ್ತು ಇಬ್ರಿಯ 12:25. [36]ಹ್ಯೂಗೋ ಮಾಕ್‌ರಾರ್ಡ್. [37]ಪ್ರವಾದಿಯು ಯೆರೂಸಲೇ ಮಿಗೆ ಮಾತನಾಡುತ್ತಿದ್ದನು. ಹೊಸ ಒಡಂಬಡಿಕೆಯಲ್ಲಿ ಯೇರೂಸಲೇಮಿನ ದೈಹಿಕ ಅಸ್ತಿತ್ವವು ಯಾವುದೇ ಗುರುತನ್ನು ಹೊಂದಿರುವದಿಲ್ಲ; ದೇವರು ತನ್ನ ಜನರಲ್ಲೂ, ಸಭೆಯಲ್ಲೂ ನೆಲಸಿರುವನು. [38]KJVಯಲ್ಲಿ "ಅನ್ಯರು" ಎಂಬುದಾಗಿದೆ. [39]ಯೇಸುವಿನ ಅನುಯಾಯಿಗಳ ಇತರೆ ಹೆಸರುಗಳು, ಸಹೋದರರು, ಶಿಷ್ಯರು, ಯೂದಾಯರು ಅದನ್ನು ಇತರೆ ನಾಮಾಂಕಿತದಲ್ಲಿ ಬಳಸುತ್ತಿದ್ದರು. [40]ಅಪೊಸ್ತಲಕೃತ್ಯಗಳು 11:26; ಯೆಶಾಯ 62:2ರ ನೇರವೇರಿಕೆ ಎಂದು ಯಾವುದೇ ಪ್ರೇರಿತ ವ್ಯಕ್ತಿಗಳು ತಿಳಿಸಿರುವದಿಲ್ಲ. ಅದು ಚರ್ಚಾಸ್ಪದವಲ್ಲ, ಒಂದು ವೇಳೆ ಇದು ಸತ್ಯವಿರಬಹುದು.

[41]"ಪ್ರವಾದಿ" *ಅಪೊಸ್ತಲರ ಕೃತ್ಯಗಳು, 1.* [42]ವೆಸ್ಟರ್ನ್ ಪುಸ್ತಕವು 28ನೇ ವಚನವನ್ನು "ನಾವು ಒಟ್ಟಾಗಿ ಸೇರಿರುವಾಗ" ಎಂದು ಆರಂಭಿಸುತ್ತದೆ (ಒತ್ತಿ ಹೇಳಿದ್ದು ನನ್ನದು) ಲೂಕನು ಮೂಲತ ಅಂತಿಯೋಕ್ಯದವನು ಎಂಬ ಪದ್ಧತಿ ಇದೆ. [43]"ಕ್ಷಾಮವು" ರೋಮಾಯದಲ್ಲಿ ಪರಿಣಾಮ ಹೊಂದಿತ್ತು, ಐಗುಪ್ತ ಹಾಗೂ ಯಾದಾಯದಲ್ಲೂ ಪರಿಣಾಮ ಉಂಟಾಗಿತ್ತು. ಜೋನೆಫಸನ ಪ್ರಕಾರ, ಯುದಾಯದ ಕ್ಷಾಮವು ಕ್ರಿ.ಶ. 45-47ರಲ್ಲಿ ಉಂಟಾಗಿತ್ತು. [44]ಬಾರ್ನಬನು ಉದಾರತೆಗೆ ಪ್ರಸಿದ್ಧಿಯಾಗಿದ್ದನು (4:36, 37). [45]NASB ಯಲ್ಲಿ ಇತ್ಯಾದಿ ಭಾಷೆಯ, "ದೇಣಿಗೆ" ಎಂಬುದಾಗಿದೆ, ಅದನ್ನು ಅನುವಾದಕರು ನೀಡಿರುವರು. ಗ್ರೀಕ್ "ಪರಿಹಾರ" ಎಂಬುದನ್ನು "ಸೇವೆ" ಎಂದು ಅನುವಾದಿಸಿದೆ. ಸಹಾಯದ ಸ್ವಭಾವವನ್ನು ತಿಳಿದಿರುವದಿಲ್ಲ. ಹಣದ ಬದಲು ಹಾಳಾಗದ ಆಹಾರ, ಅಲ್ಪ ಆಹಾರದ ಕೊಳ್ಳುವಿಕೆಯು ನಿಷೇದವಾಗಿತ್ತು. [46]ಶೇಕಡವಾರು ಅಂದರೆ ಹತ್ತರ ಒಂದಂಶ ಅಥವಾ ಶೇ 10/(ಮಲಾಕಿ 3:8, 10). [47]"ಸಹಕಾರ" ಸಂಯಮ ಅಥವಾ ಪ್ರೀತಿ ಮುಂದಿನ ಪುಸ್ತಕದ ಟಿಪ್ಪಣಿ. [48]ಸೌಲನು, ಎರಡನೆಯ

ಸಾರಿ ಯೆರೂಸಲೇಮಿಗೆ ಹೋದನು ಗಲಾತ್ಯ 2:1-10. ಅಪೊಸ್ತಲರ ಕೃತ್ಯಗಳು 11ರ ಲ್ಲಿರುವ ಸಂದರ್ಶನವಾಗಿರಬಹುದು. ಅಥವಾ ಅಪೊಸ್ತಲರ ಕೃತ್ಯಗಳು 15ರ ವಿವರಣೆಯಂತಿರಬಹುದು. ಯಾಕೆಂದರೆ ಅದು ಸಹ ಅಪೊಸ್ತಲರ ಕೃತ್ಯಗಳು 15ರ ವಿಚಾರವನ್ನೆ ತಿಳಿಸುತ್ತದೆ. ಅಪೊಸ್ತಲರ ಕೃತ್ಯಗಳು 15 ವಿಚಾರವನ್ನು ಗಲಾತ್ಯ 2ರಲ್ಲಿ ಕಾಣುತ್ತೇವೆ. [49]ಹಿರಿಯರ ಕುರಿತು ಚರ್ಚೆಗೆ, ಮುಂದಿನ ಪಾಠದಲ್ಲಿರುವ 14:23ರ ಟಿಪ್ಪಣಿ ನೋಡಿರಿ. [50]ಯೆರೂಸಲೇಮಿನಲ್ಲಿ ಹಿರಿಯರು ಇದ್ದರು ಎಂದು ಈ ಘಟನೆಯು ತಿಳಿಸುತ್ತದೆ (15:2), ಯೂದಾಯ ಮತ್ತು ಇತರೆ ಕಡೆ ಹಿರಿಯರ ಕುರಿತು ವಿವರಣೆಗಳಿಲ್ಲ. "ಸಭೆಯ ಸಹಕಾರದ" ಕುರಿತ ತೀವ್ರವಾದ ನಿಯಮಾವಳಿಗಳ ಕುರಿತು, ಯೆರೂಸಲೇಮಿನ ಹಿರಿಯರು "ದ್ರವ್ಯಗಳನ್ನು ಹಂಚಿದರು" ಎಂಬುದನ್ನು ನಿರಾಕರಿಸುತ್ತಾರೆ, ಅದು ಸಭೆಯ ಕ್ರಮಕ್ಕೆ ವಿರುದ್ಧವಾದದ್ದು.

[51]ಚಿಕ್ಕ ಮಕ್ಕಳ ಕೈ ಬೆರಳುಗಳ ಆಟದಲ್ಲಿ, ಕೈ ಮತ್ತು ಬೆರಳುಗಳು, ಮೊದಲನೆಯದಾಗಿ ಸಭೆಯ ಅಕೃತಿಯನ್ನು ಎರಡನೆಯದಾಗಿ ಕಟ್ಟಡದ ಇಳಿಜಾರನ್ನೂ ಅಂತಿಮವಾಗಿ ಕಟ್ಟಡದಲ್ಲಿರುವ ಜನರ ಚಿತ್ರಣವನ್ನು ನೀಡುತ್ತದೆ.